ವಿಜಯಪುರ | ಸಂಪುಟ 02 | ಸಂಚಿಕೆ 14 | ಪುಟ 4 | ₹ 3.00

https://udayarashminews.com

udayarashmi 7026028778

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com | RNI NO: KARKAN/2023/86203 | ಶುಕ್ರವಾರ, ಮಾರ್ಚ್ 01, 2024

“ಸಿಂದಗಿ ತಾಲೂಕಿಗೆ ಐತಿಹಾಸಿಕ ಹಿನ್ನಲೆ ಇದೆ. ಇದು ಶೈಕ್ಷಣಿಕವಾಗಿ, ಭೌಗೋಳಿಕವಾಗಿ ಸಾಕಷ್ಟು ಮುಂದುವರಿದಿದೆ. ಕಾರಣ ವಿಜಯಪುರ ಜಿಲ್ಲೆ ವಿಭಜನೆಯಾದರೆ ಸಿಂದಗಿಯನ್ನು ಜಿಲ್ಲೆಯಾಗಿಸುವಲ್ಲಿ ಪ್ರಥಮ ಆದ್ಯತೆ ನೀಡುವೆ.”



– ಅಶೋಕ ಮನಗೂಳಿ
ಶಾಸಕರು, ಸಿಂದಗಿ

### ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಅವರಿಂದ ಸಿಎಂ ಸಿದ್ದರಾಮಯ್ಯಗೆ ಸಲ್ಲಿಕೆ

# ಜಾತಿವಾರು ಜನ ಗಣತಿ ವರದಿ ಸರ್ಕಾರಕ್ಕೆ ಸಲ್ಲಿಕೆ

ಬೆಂಗಳೂರು: ಕರ್ನಾಟಕದ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿವಾರು ಜನ ಗಣತಿ) ವರದಿಯನ್ನು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ಅವರು ಗುರುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲ್ಲಿಸಿದ್ದಾರೆ.

ವಿಧಾನಸೌಧದಲ್ಲಿ ಸಿಎಂ ಭೇಟಿಯಾದ ಜಯಪ್ರಕಾಶ್ ಹೆಗ್ಡೆ, 2015ರಲ್ಲಿ ನಡೆಸಿದ್ದ ಸಮೀಕ್ಷೆಯ ವರದಿ ಸಲ್ಲಿಕೆ ಮಾಡಿದ್ದಾರೆ.

ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, “ನಮ್ಮ ಯಾವುದೇ ದಾಖಲೆಗಳು ಕಳೆದು ಹೋಗಿಲ್ಲ. ಇದು ಕೇವಲ ಮಾಧ್ಯಮಗಳ ಸೃಷ್ಟಿ. ವರದಿಯ ಅಂಶಗಳನ್ನು ನಾವು ಬಹಿರಂಗಪಡಿಸಲು ಸಾಧ್ಯವಿಲ್ಲ. ಅದು ಸರ್ಕಾರದ ಕೆಲಸ” ಎಂದರು.



ರಾಜ್ಯದ ವಿವಿಧ ಸಮುದಾಯಗಳ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಪರಿಸ್ಥಿತಿ ಹಾಗೂ ಶಿಫಾರಸುಗಳನ್ನು ಒಳಗೊಂಡ 200 ಪುಟಗಳ ಪ್ರಧಾನ ವರದಿ ಮತ್ತು 48 ಸಂಪುಟಗಳಷ್ಟಿರುವ ದತ್ತಾಂಶದ ವಿವರಗಳನ್ನು ಮುಖ್ಯಮಂತ್ರಿಗೆ ಹಸ್ತಾಂತರ ಮಾಡಲಾಗಿದೆ ಎಂದು ಹೇಳಿದರು.

ವರದಿ ಸ್ವೀಕರಿಸಿ ಮಾತನಾಡಿದ ಸಿಎಂ ಸಿದ್ದರಾಮಯ್ಯ, ವರದಿಯನ್ನು ಸಚಿವ ಸಂಪುಟದ ಮುಂದಿಟ್ಟು ಚರ್ಚೆ ನಡೆಸಲಾಗುವುದು ಎಂದು ತಿಳಿಸಿದ್ದಾರೆ.

ಹೆಚ್. ಕಾಂತರಾಜು ನೇತೃತ್ವದ ಹಿಂದುಳಿದ ವರ್ಗಗಳ ಆಯೋಗವು 2015ರಲ್ಲಿ ರಾಜ್ಯ ವಿವಿಧ ಸಮುದಾಯಗಳ ಜನರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳ ಕುರಿತು ಸಮೀಕ್ಷೆ ನಡೆಸಿತ್ತು. ಇದಕ್ಕಾಗಿ ಸರ್ಕಾರ 158.47 ಕೋಟಿ ರೂಪಾಯಿ ವೆಚ್ಚ ಮಾಡಿತ್ತು. ಆದರೆ, ಕಾಂತರಾಜು ಆಯೋಗದ ಅವಧಿ ಮುಕ್ತಾಯಗೊಳ್ಳುವ ಮುನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರಲಿಲ್ಲ.

ನಂತರ ಬಿಜೆಪಿ ಸರ್ಕಾರ ಬಂದಿದ್ದ‍ರಿಂದ ಸಮೀಕ್ಷೆಯ ವರದಿಯ ಸಲ್ಲಿಸುವ ಕಾರ್ಯ ನಡೆದಿರಲಿಲ್ಲ. ಇದೀಗ ಮತ್ತೊಮ್ಮೆ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಬಂದಿದ್ದು, ಅಂದಿನ ಸಮೀಕ್ಷೆಯ ವರದಿಯನ್ನು ಪಡೆದುಕೊಂಡಿದೆ.

## ಜಯಪ್ರಕಾಶ್ ಹೆಗ್ಡೆ ಅವಧಿ ವಿಸ್ತರಣೆ



ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ನೇಮಕಗೊಂಡಿದ್ದ ಅಧ್ಯಕ್ಷ ಕೆ. ಜಯಪ್ರಕಾಶ್ ಹೆಗ್ಡೆ ಮತ್ತು ಸದಸ್ಯರ ಅವಧಿ ಕಳೆದ ನವೆಂಬರ್‌ನಲ್ಲಿ ಮುಗಿದಿತ್ತು. ಪರಿಷ್ಕೃತ ಸಮಗ್ರ ವರದಿ ಅಂತಿಮಗೊಳಿಸಲು ಕಾಲಾವಕಾಶ ಅಗತ್ಯವಿದೆ ಎಂಬ ಕಾರಣಕ್ಕೆ ಸರ್ಕಾರ ಅವಧಿಯನ್ನು ಜನವರಿ 31ರವರೆಗೆ ವಿಸ್ತರಿಸಿ ಆದೇಶ ಹೊರಡಿಸಿತ್ತು.

ವರದಿ ಅಂತಿಮಗೊಳಿಸುವ ಹಾಗೂ ಮುದ್ರಣಕ್ಕೆ ಕಾಲಾವಕಾಶದ ಕಾರಣಕ್ಕೆ ಆಯೋಗದ ಅಧ್ಯಕ್ಷ ಮತ್ತು ಸದಸ್ಯರ ಅವಧಿಯನ್ನು 2ನೇ ಬಾರಿಗೆ ಫೆಬ್ರವರಿ 29ರವರೆಗೆ ವಿಸ್ತರಣೆ ಮಾಡಲಾಗಿತ್ತು. ಇದೀಗ ತಮ್ಮ ಅಧಿಕಾರಾವಧಿಯ ಕೊನೆಯ ದಿನ ಜಾತಿ ಗಣತಿ ವರದಿಯನ್ನು ಜಯಪ್ರಕಾಶ್ ಹೆಗ್ಡೆ ಸರ್ಕಾರಕ್ಕೆ ಸಲ್ಲಿಸಿದ್ದಾರೆ.

## ವಿರೋಧದ ನಡುವೆ ವರದಿ ಸಲ್ಲಿಕೆ

ಜಾತಿ ಜನಗಣತಿ ಸ್ವೀಕಾರ ಆಕ್ಷೇಪಿಸಿ ಲಿಂಗಾಯತ ಸ್ವಾಮಿಗಳು, ಒಕ್ಕಲಿಗ ಸ್ವಾಮೀಜಿಗಳು, ಮುಖಂಡರು ಮುಖ್ಯಮಂತ್ರಿಗೆ ಪತ್ರ ಬರೆದಿದ್ದರು. ಉಪಮುಖ್ಯಮಂತ್ರಿ ಹಾಗೂ ಒಕ್ಕಲಿಗ ಸಮುದಾಯದ ಮುಖಂಡ ಡಿ.ಕೆ.ಶಿವಕುಮಾರ್ ಅವರ ಸಹಿ ಈ ಪತ್ರದಲ್ಲಿ ಇತ್ತು. ಇದು ಪರ ವಿರೋಧಕ್ಕೆ ಎಡೆಮಾಡಿಕೊಟ್ಟಿತ್ತು. ಹಾಗೆಯೇ ಕಾಂಗ್ರೆಸ್ ಲಿಂಗಾಯತ ನಾಯಕರೂ ಕೂಡ ವರದಿಗೆ ಆಕ್ಷೇಪಣೆ ವ್ಯಕ್ತಪಡಿಸಿದ್ದರು.

ಇದಾದ ನಂತರ ಹಲವು ವೇದಿಕೆಗಳಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ವರದಿ ಸ್ವೀಕಾರಕ್ಕೆ ಬದ್ಧ ಎಂದು ಹೇಳಿದ್ದರು. ಈಚೆಗಷ್ಟೇ ಸ್ವತಃ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ತಂಗಡಗಿ ಕೂಡ, “ವರದಿ ಸ್ವೀಕರಿಸುವ ಬಗ್ಗೆ ಸರಕಾರಕ್ಕೆ ಬದ್ಧತೆ ಇದೆ. ಸ್ವೀಕರಿಸಿಯೇ ತೀರುತ್ತೇವೆ. ಪಲಾಯನದ ಪ್ರಶ್ನೆ ಇಲ್ಲ. ಫೆ. 29ರವರೆಗೆ ಕಾಯಿರಿ” ಎಂದು ಸುಳಿವು ನೀಡಿದ್ದರು.

## ರಾಜ ನುಡಿ

ನೀವು ಬಿದ್ದ ಸ್ಥಳಕ್ಕೆ ಮರಳಿ ಹೋಗುವುದರಿಂದ ನಿಮ್ಮ ಗಾಯ ಮಾಯುವುದಿಲ್ಲ. ಆ ಜಾಗದಿಂದ ದೂರ (ಆಸ್ಪತ್ರೆಗೆ) ಹೋಗುವುದ‍ರಿಂದ ಮಾಯಬಹುದು. ಮೈ ಅಥವಾ ಮನದ ಗಾಯ ಮಾಯಲು ಬಿದ್ದ ಸ್ಥಳದಿಂದ ಅಥವಾ ಬೀಳಿಸಿದವರಿಂದ ದೂರ ಸರಿಯುವುದು ಉತ್ತಮ.

–ಡಾ. ರಾಜಶೇಖರ ನಾಗೂರ

### ವಿಜಯಪುರ ಮಹಾನಗರ ಪಾಲಿಕೆ ಸಾಮಾನ್ಯ ಸಭೆಯಲ್ಲಿ ಸದಸ್ಯ ಪ್ರೇಮಾನಂದ ಬಿರಾದಾರ ಆಗ್ರಹ

# ಗುಂಟಾ ಪ್ಲಾಟ್ ನಿವಾಸಿಗಳಿಗೆ ಡಬಲ್ ಟ್ಯಾಕ್ಸ್ ಹೊರೆ ಬೇಡ

**ಉದಯರಶ್ಮಿ ನ್ಯೂಸ್**




ವಿಜಯಪುರ: ಗುಂಟಾ ಪ್ಲಾಟ್ ನಿವಾಸಿಗಳು ಅತ್ಯಂತ ಬಡವರು, ಹೀಗಾಗಿ ಅವರಿಗೆ ಡಬಲ್ ಟ್ಯಾಕ್ಸ್ ಹೊರೆ ಹೊರೆಸುವುದು ಬೇಡ ಎಂದು ಪಾಲಿಕೆ ಸದಸ್ಯ ಪ್ರೇಮಾನಂದ ಬಿರಾದಾರ ಪ್ರಬಲವಾಗಿ ಒತ್ತಾಯಿಸಿದರು.

ವಿಜಯಪುರ ಮಹಾನಗರ ಪಾಲಿಕೆ ಸಭಾಂಗಣದಲ್ಲಿ ಮೇಯರ್ ಮೆಹಜಬೀನ್ ಹೊರ್ತಿ ಅಧ್ಯಕ್ಷತೆಯಲ್ಲಿ ನಡೆದ ಪಾಲಿಕೆ ಸಾಮಾನ್ಯ ಸಭೆಯಲ್ಲಿ ಈ ವಿಷಯದ ಕುರಿತು ಬೆಳಕು ಚೆಲ್ಲಿದ ಬಿರಾದಾರ, ಆಟೋ, ಟಾಂಗಾ, ಕೂಲಿಕಾರ್ಮಿಕರೇ ಗುಂಟಾ ಪ್ಲಾಟ್ ಖರೀದಿಸಿದ್ದಾರೆ. ಕೋವಿಡ್‌ನಲ್ಲಿ ದುಡಿಯುವ ಅನೇಕ ಯಜಮಾನರೇ ತೀರಿ ಹೋಗಿದ್ದಾರೆ. ಅಂತಹ ಕುಟುಂಬಗಳು ಎಲ್ಲಿ ಹೋಗಬೇಕು? ಡಬಲ್ ಟ್ಯಾಕ್ಸ್, ದಂಡ ಹೀಗೆ ಎಲ್ಲವನ್ನು ಕಟ್ಟಲು ಅವರು ಸಾಲ ಮಾಡಬೇಕೆ? ಅವರು ಉಪಜೀವನ ನಡೆಸುವುದೇ ಕಷ್ಟವಾಗಿದೆ, ಅಂತಹದರಲ್ಲಿ ದೊಡ್ಡ ದೊಡ್ಡ ಮೊತ್ತದ ದಂಡ ಕಟ್ಟಲು ಆ ಬಡ ಜನರಿಗೆ ಸಾಧ್ಯವೇ ಎಂದು ಪ್ರಶ್ನಿಸಿದರು.

ಇದಕ್ಕೆ ಸ್ಪಷ್ಟೀಕರಣ ನೀಡಿದ ಆಯುಕ್ತ ಬದರುದ್ದೀನ ಸೌದಾಗರ, ಕಾಯ್ದೆ ಅನ್ವಯ ಗುಂಟಾ ಪ್ಲಾಟ್‌ಗಳಿಂದ ಕರ ವಸೂಲಿ ಮಾಡಲಾಗುತ್ತಿದೆ. ಇದು ವಿನಾಯ್ತಿ ನೀಡುವುದು ಸರ್ಕಾರಿ ಮಟ್ಟದಲ್ಲಿ ತೀರ್ಮಾನವಾಗಬೇಕು ಎಂದರು.

ಇದಕ್ಕೂ ಮುನ್ನ ಸದಸ್ಯ ರಾಜಶೇಖರ ಮಗಿಮಠ, ಠರಾವು ಸ್ವೀಕೃತವಾದ ಅಂಶಗಳನ್ನು ಕೈ ಬರಹದಲ್ಲಿಯೇ ಬರೆಯಬೇಕು, ಆದರೆ ಈ ಸಂಪ್ರದಾಯವನ್ನು ಗಾಳಿಗೆ ತೂರಿರುವುದು ಎಷ್ಟು ಸರಿ? ಕೈ ಬರಹ ಇದ್ದರೆ ತಿದ್ದಲು ಸಾಧ್ಯವಿಲ್ಲ, ಅಧಿನಿಯಮದಲ್ಲಿಯೂ ಕೈ ಬರಹ ಎಂದೇ ಉಲ್ಲೇಖವಿದೆ, ಹೀಗಾಗಿ ಠರಾವು ಪುಸ್ತಕವನ್ನು ಕೈ ಬರಹದಲ್ಲಿಯೇ ಬರೆಯಬೇಕು ಎಂದು ಒತ್ತಾಯಿಸಿದರು.

ಆಗ ಸ್ಪಷ್ಟೀಕರಣ ನೀಡಿದ ಆಯುಕ್ತ ಬದ್ರುದ್ದೀನ್ ಸೌದಾಗರ ಮಾತನಾಡಿ, 2008 ರಿಂದ ಠರಾವುಗಳನ್ನು ಗಣಕೀರಣ ಮೂಲಕ ಬರೆಯಲಾಗುತ್ತಿದೆ ಎಂದಾಗ ಮಗಿಮಠ ಅಸಮಾಧಾನ ಹೊರಹಾಕಿ, ಸಭೆಗೆ ತಪ್ಪು ಮಾಹಿತಿ ನೀಡಬೇಡಿ, ಠರಾವು ಪುಸ್ತಕ ಒಂದು ಮಹತ್ವದ ದಾಖಲೆ, ಯಾವುದೇ ಠರಾವು ಇರಲಿ, ಅದು ಕೈ ಬರಹದಲ್ಲಿಯೇ ಬರೆಯಬೇಕು ಎಂದು ಪಟ್ಟು ಹಿಡಿದಾಗ ಕೊನೆಗೂ ಕೈ ಬರಹದಲ್ಲಿ ಠರಾವು ಬರೆಯುವ ನಿಟ್ಟಿನಲ್ಲಿ ನಿರ್ಧಾರ ಕೈಗೊಳ್ಳಲಾಯಿತು.

ಇದೇ ಸಂದರ್ಭದಲ್ಲಿ ಸಾಮಾನ್ಯ ಸಭೆಯ ಸಂಪೂರ್ಣ ವಿಡಿಯೋ ಚಿತ್ರೀಕರಣ ಮಾಡುವುದು ಅಗತ್ಯ ಎಂದರು.

ಪಾಲಿಕೆ ಸದಸ್ಯ ರಾಹುಲ್ ಜಾಧವ, ಪಾಲಿಕೆ ಆವರಣದಲ್ಲಿ ಗಣಪತಿ ಪ್ರತಿಮೆ ಸ್ಥಾಪಿಸುವ ನಿಟ್ಟಿನಲ್ಲಿ ಈ ಹಿಂದೆಯೇ ನಿರ್ಣಯ ಸ್ವೀಕರಿಸಲಾಗಿದ್ದು, ಈ ಬಗ್ಗೆ ಕೂಡಲೇ ನಿರ್ಧಾರ ಪ್ರಕಟಿಸಿ ಎಂದರು. ಇದಕ್ಕೆ ಸದಸ್ಯ ಪ್ರೇಮಾನಂದ ಬಿರಾದಾರ, ರಾಜಶೇಖರ ಮಗಿಮಠ ಮೊದಲಾದವರು ದನಿಗೂಡಿಸಿದರು. ಹಳೆಯ ಕಟ್ಟಡದಲ್ಲಿ ಗಣಪತಿ ಪ್ರತಿಮೆ ಇತ್ತು, ಈಗ ಪ್ರತಿಷ್ಠಾಪನೆಗೆ ವಿಳಂಬವೇಕೆ ಎಂದು ಪ್ರಶ್ನಿಸಿದರು.

ಸಂಡೇ ಬಜಾರ್ ಗುತ್ತಿಗೆದಾರರು ಬಡ ಕಾಯಿಪಲ್ಲೆ ವ್ಯಾಪಾರಸ್ಥರಿಂದ ತಕ್ಕಡಿ ಕಸಿದುಕೊಳ್ಳುವುದು, ದುಡ್ಡು ಕೊಡದಿದ್ದರೆ ಅಸಭ್ಯವಾಗಿ ವರ್ತನೆ ಮಾಡಿರುವುದು ಈ ಹಿಂದೆಯೂ ನಡೆದಾಗ ನಾನೇ ಗಮನ ಸೆಳೆದಿದ್ದೆ. ಈ ರೀತಿಯ ದಬ್ಬಾಳಿಕೆ ನಡೆಯದಂತೆ ಪಾಲಿಕೆ ನಿಗಾ ವಹಿಸಬೇಕು, ಅಷ್ಟೇ ಅಲ್ಲದೇ ಕಾಯಿಪಲ್ಲೆ ಮಾರಾಟಗಾರ‍ರಿಗೆ ಸಕಲ ಸೌಲಭ್ಯ ಕಲ್ಪಿಸಬೇಕು, ಈ ವಿಷಯವಾಗಿ ಠರಾವು ಸ್ವೀಕರಿಸಬೇಕು, ಇಲ್ಲವಾದರೆ ನಾನು ನ್ಯಾಯಾಲಯದ ಮೆಟ್ಟಿಲು ಏರಬೇಕಾಗುತ್ತದೆ ಎಂದು ಬಿರಾದಾರ ಗುಡುಗಿದರು.

ಸಭೆ ಆರಂಭವಾಗುತ್ತಿದ್ದಂತೆ ಕುರ್ಚಿಗಳು ಅತ್ಯಂತ ಅವ್ಯವಸ್ಥೆಯಿಂದ ಕೂಡಿವೆ, ಕೂರಲು ಸಹ ಸಾಧ್ಯವಾಗದ ಪರಿಸ್ಥಿತಿ ಇದೆ, ಮೊದಲು ಕುರ್ಚಿಗಳನ್ನು ಬದಲಿಸುವಂತೆ ಪಾಲಿಕೆ ಸದಸ್ಯರು ಪಟ್ಟು ಹಿಡಿದರು. ಮೈಕ್ ಸರಿಯಿಲ್ಲ, ಮೈಕ್ ಸರಿ ಇಲ್ಲದಿದ್ದರೆ ನಾವು ಮಾತನಾಡುವುದಾದರೂ ಹೇಗೆ? ಮೈಕ್ ಆನ್ ಇದ್ದರೂ ಸೌಂಡ್ ಬರುತ್ತಿಲ್ಲ ಎಂದು ಅಸಮಾಧಾನ ಹೊರಹಾಕಿದರು.

ಸಿಟಿಎಸ್ ಸರ್ವೆ ನಂ.1769 ರಲ್ಲಿರುವ ಸಾ-ಮಿಲ್‌ದವರಿಗೆ ಲೀಜ್ ಮುಂದುವರೆಸುವ ನಿಟ್ಟಿನಲ್ಲಿ ಪ್ರತಿಕ್ರಿಯೆ ನೀಡಿದ ಸದಸ್ಯ ಅಶೋಕ ನ್ಯಾಮಗೌಡ, ಈ ಉದ್ಯಮವನ್ನು ನಂಬಿ ಅನೇಕರು ಜೀವನ ನಡೆಸುತ್ತಿದ್ದಾರೆ, ಹೀಗಾಗಿ ಮೂಲತ: ಅವರಿಗೆ ಲೀಜ್ ಅವಧಿ ಮುಂದುವರೆಸಿ ಅಗತ್ಯ ಸೌಕರ್ಯಗಳನ್ನು ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಇದಕ್ಕೆ ಸದಸ್ಯ ರಾಜಶೇಖರ ಮಗಿಮಠ ದನಿಗೂಡಿಸಿದರು.

ಮೇಯರ್ ಮೆಹಜಬೀನ್ ಹೊರ್ತಿ, ಉಪಮೇಯರ್ ದಿನೇಶ ಹಳ್ಳಿ, ಪಾಲಿಕೆ ಆಯುಕ್ತ ಬದರುದ್ದೀನ್ ಸೌದಾಗರ, ಎಲ್ಲ ವಾರ್ಡ್ ಸದಸ್ಯರು, ಅಧಿಕಾರಿಗಳು ಪಾಲ್ಗೊಂಡಿದ್ದರು.

### ಚಿಪ್ಸ್-ಕೇಕ್ ತಿನ್ನಲು ಸಾಮಾನ್ಯ ಸಭೆಗೆ ಬರಬೇಕೆ?

ಕಾಯಿಪಲ್ಲೆ ಮಾರಾಟ ಮಾಡಲು ಬರುವ ಮಹಿಳೆಯರಿಗೆ ಶೌಚಾಲಯ, ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಿ ಎಂದು ಸಭೆಯ ಗಮನಕ್ಕೆ ತಂದಿದ್ದೆ, ಆದರೆ ಈ ವಿಷಯವಾಗಿ ಒಂದು ಹೆಜ್ಜೆಯೂ ಪಾಲಿಕೆ ಮುಂದೆ ಇರಿಸಿಲ್ಲ, ಹೀಗಾದರೆ ಹೇಗೆ? ನಾವೇನು ಬರೀ ಚಿಪ್ಸ್-ಕೇಕ್ ತಿನ್ನಲು ಸಾಮಾನ್ಯ ಸಭೆಗೆ ಬರಬೇಕೆ ಎಂದು ಪಾಲಿಕೆ ಸದಸ್ಯ ಪ್ರೇಮಾನಂದ ಬಿರಾದಾರ ಅಸಮಾಧಾನ ಹೊರಹಾಕಿದರು.

### ಪಾಕ್ ಪರ ಘೋಷಣೆ ವಿರುದ್ಧ ಖಂಡನಾ ನಿರ್ಣಯಕ್ಕೆ ಪಟ್ಟು

ವಿಧಾನಸೌಧದಲ್ಲಿ 'ಪಾಕಿಸ್ತಾನ್ ಜಿಂದಾಬಾದ್' ಎಂಬ ಹೇಳಿಕೆ ಮೊಳಗಿರುವುದು ದುರದೃಷ್ಟಕರ. ಈ ರೀತಿಯ ಪ್ರಕರಣದ ವಿರುದ್ಧ ಖಂಡನಾ ನಿರ್ಣಯವನ್ನು ಮಂಡಿಸಬೇಕು ಎಂದು ಪಾಲಿಕೆ ಸದಸ್ಯ ಶಿವರುದ್ರ ಬಾಗಲಕೋಟ ಒತ್ತಾಯಿಸಿದರು.

ಈ ಘಟನೆ ನಡೆದಿದೆ ಎಂದರೆ ಅದು ಸಾಬೀತಾಗಬೇಕು, ಸಾಬೀತಾದರೆ ಸರ್ಕಾರ ಕ್ರಮ ಕೈಗೊಳ್ಳಲಿದೆ, ಎಫ್‌ಎಸ್‌ಎಲ್ ವರದಿ ಬಂದ ನಂತರ ಆ ರೀತಿ ಘಟನೆ ನಡೆದಿದ್ದರೆ ಅದರ ವಿರುದ್ಧ ಖಂಡನಾ ನಿರ್ಣಯ ಸಹ ತೆಗೆದುಕೊಳ್ಳೋಣ ಎಂಧು ಉಪಮೇಯರ್ ದಿನೇಶ ಹಳ್ಳಿ ಭರವಸೆ ನೀಡಿದರು.

ಪಾಲಿಕೆ ಸದಸ್ಯೆ ವಿಮಲಾ ಕಾಣೆ ಮಾತನಾಡಿ, ನಮ್ಮ ಭಾರತ ದೇಶ ನಮ್ಮ ಪ್ರಾಣಕ್ಕಿಂತ ಹೆಚ್ಚು, ವಿಧಾನಸೌಧದಲ್ಲಿ ಅಲ್ಲ, ಎಲ್ಲಿಯೂ ಸಹ ನಮ್ಮ ಶತ್ರು ರಾಷ್ಟ್ರದ ಪರ ಘೋಷಣೆ ಮೊಳಗಬಾರದು, ವಿಧಾನಸೌಧದಲ್ಲಿ ನಡೆದ ಘಟನೆ ಬಗ್ಗೆ ಎಫ್‌ಎಸ್‌ಎಲ್ ವರದಿ ಬರಬೇಕಿದೆ, ಒಂದು ವೇಳೆ ಆ ರೀತಿ ಘಟನೆ ನಡೆದಿದ್ದರೆ ಅದು ಖಂಡನಾರ್ಹ ಎಂದರು.

# ಬೇಡಿಕೆ ಈಡೇರಿಕೆಗೆ ಮಾದಿಗ ದಂಡೋರ ಸಮಿತಿ ಪ್ರತಿಭಟನೆ

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಮಾದಿಗ ದಂಡೋರ ಹೋರಾಟ ಸಮಿತಿಯ ಪದಾಧಿಕಾರಿಗಳು ಹಾಗೂ ವಿವಿಧ ದಲಿತಪರ ಸಂಘಟನೆಗಳ ಮುಖಂಡರು ಪಟ್ಟಣದಲ್ಲಿ ಪ್ರತಿಭಟನೆ ನಡೆಸುವ ಮೂಲಕ ತಹಶೀಲ್ದಾರ ಮುಖಾಂತರ ಮುಖ್ಯ ಮಂತ್ರಿಗಳಿಗೆ ಮನವಿ ಸಲ್ಲಿಸಿದರು.





ಅಂಬೇಡ್ಕರ್ ವೃತ್ತದಿಂದ ಶುರುವಾದ ಮೆರವಣಿಗೆ ಸಂಗೊಳ್ಳಿ ರಾಯಣ್ಣ ವೃತ್ತ, ಬಸವೇಶ್ವರ ವೃತ್ತ, ಕಿತ್ತೂರು ರಾಣಿ ಚನ್ನಮ್ಮ ವೃತ್ತ ಮಾರ್ಗವಾಗಿ ತಹಶೀಲ್ದಾರ ಕಚೇರಿಗೆ ಬಂದು ತಲುಪಿತು. ಅಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಪ್ರಮುಖರಾದ ಡಿ.ಬಿ.ಮುದೂರ, ಸಿ.ಜಿ.ವಿಜಯಕರ, ತಿಪ್ಪಣ್ಣ ದೊಡಮನಿ, ಬಾಲಚಂದ್ರ ಹುಲ್ಲೂರ, ಕೆ.ಬಿ.ದೊಡಮನಿ, ಡಿ.ವಾಯ್.ಹಂಗರಗಿ ಮತ್ತೀತರರು ಮಾತನಾಡಿ, ತಾಲೂಕಿನ ಕೆಲವು ಗ್ರಾಮಗಳಲ್ಲಿ ದಲಿತ ಸಮುದಾಯದ ಬಂಧುಗಳಿಗೆ ಯಾವುದೇ ಸ್ಮಶಾನ ಇಲ್ಲ. ಇನ್ನೂ ಕೆಲವು ಗ್ರಾಮಗಳಲ್ಲಿ ಅಸ್ಪೃಶ್ಯತೆ ವ್ಯವಸ್ಥೆ ಇದ್ದು ಸಮಾನತೆ ಇಲ್ಲ. ಈ ಬಗ್ಗೆ ಹಲವಾರು ಬಾರಿ ಹೋರಾಟಗಳನ್ನು ಮಾಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಈ ಕೂಡಲೇ ಅಧಿಕಾರಿಗಳು ನಮ್ಮ ಬೇಡಿಕೆಗಳಿಗೆ ಸ್ಪಂದಿಸುವ ಕಾರ್ಯ ಮಾಡಬೇಕು ಎಂದರು.

ಚನ್ನಯ್ಯ ಭವನ ಮತ್ತು ಗಾರ್ಡನ ನಿರ್ಮಾಣ, ಪ್ರತಿ ಹಳ್ಳಿಯಲ್ಲಿ ಅಸ್ಪೃಶ್ಯತೆ ನಿವಾರಣೆ ಬಗ್ಗೆ ಫಲಕಗಳನ್ನು ಅಳವಡಿಸಬೇಕು. ಸದಾಶಿವ ಆಯೋಗದ ವರದಿ ಕೇಂದ್ರಕ್ಕೆ ಶಿಫಾರಸ್ಸು ಮಾಡಬೇಕು. ಪ್ರತೀ ಗ್ರಾಮಗಳಲ್ಲಿ ರುದ್ರಭೂಮಿ ನೀಡಬೇಕು ಹೀಗೆ ಒಟ್ಟು 15 ಬೇಡಿಕೆಗಳು ಮತ್ತು ಹಕ್ಕೊತ್ತಾಯಗಳುಳ್ಳ ಮನವಿ ಪತ್ರವನ್ನು ತಹಶೀಲ್ದಾರ ಮೂಲಕ ಮುಖ್ಯಮಂತ್ರಿಗಳಿಗೆ ನೀಡಲಾಯಿತು.

ಹೋರಾಟದಲ್ಲಿ ಸಂಗಣ್ಣ ವಿಜಯಕರ, ರಾಮು ತಂಬೂರಿ, ಎಸ್.ಬಿ.ಬಸರಕೋಡ, ಮುತ್ತು ಪೂಜಾರಿ, ಹುಲಗಪ್ಪ ನಾಗರಬೆಟ್ಟ, ಕಾಶಪ್ಪ ತೊಗರಿ, ಡಿ.ಎಸ್.ಹೊಸಮನಿ, ಎಸ್.ಎಸ್.ಶಿವಪೂರ, ಬಿ.ಎ.ಹೊಸಮನಿ, ಬಸವರಾಜ ವನಕಿಹಾಳ, ಹೆಚ್.ವಾಯ್. ಮಾದರ, ಎಂ.ಎ.ಮಾದರ, ಜಿ.ಎಚ್.ಮಾದರ ಸೇರಿದಂತೆ ಮತ್ತೀತರರು ಇದ್ದರು.

## ವಚನ ಚಿಂತನ 312



### ಜೀವೋತ್ಪತ್ತಿಯ ಕ್ರಮವಿಧಿ

*ವಿಹಂಗನ ತತ್ತಿಗೆ ಸ್ಪರ್ಶನದಿಂದ*
*ಕೂರ್ಮನ ಶಿಶುವಿಂಗೆ ಕೂರ್ಮೆಯಿಂದ*
*ಚತುಃಪಾದಿ ನರಕುಲಕ್ಕೆ ಕುಚಗಳಿಂದ*
*ಮಿಕ್ಕಾದ ಜೀವಜಾತಿ ಲಕ್ಷಣಕ್ಕೆ ತಮ್ಮ ಸ್ಥಾನದಲ್ಲಿಯೆ ತೃಪ್ತಿ.*
*ಆವ ಸ್ಥಲವ ನೆಮ್ಮಿದಲ್ಲಿಯೂ ಭಾವಶುದ್ಧವಾದಲ್ಲಿಯೆ ಮುಕ್ತಿ.*
*ಉಭಯಕ್ಕೆ ಉಪಮಾತೀತನಾದಾಗಲೇ ನಿರ್ವಿಜ*
*ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ.*

– ಪ್ರಸಾದಿ ಭೋಗಣ್ಣನವರು

ಪ್ರಸಾದಿ ಭೋಗಣ್ಣನವರು ಈ ವಚನದಲ್ಲಿ ಭೂಜೀವ ಸಂಕುಲದಲ್ಲಿ ವಿವಿಧ ಬಗೆಯ ಜೀವಿಗಳು ಹೇಗೆ ಸಂರಕ್ಷಿಸುತ್ತವೆ ಮತ್ತು ಜೀವ ಪ್ರಬೇಧಗಳ ಬೆಳವಣಿಗೆಯ ಬಗ್ಗೆ ಅತ್ಯಂತ ಸೂಕ್ಷ್ಮ ದೃಷ್ಟಿಯನ್ನು ಹರಿಸಿರುವುದನ್ನು ನಾವು ಕಾಣುತ್ತೇವೆ, ವಚನದ ಪ್ರಾರಂಭದ ಸಾಲಿನಲ್ಲಿ ತಿಳಿಸಿದಂತೆ “ವಿಹಂಗನ ತತ್ತಿಗೆ ಸ್ಪರ್ಶನದಿಂದ” ವಿಹಂಗ ಎಂದರೆ ಪಕ್ಷಿಗಳು, ಪಕ್ಷಿಗಳು ತಮ್ಮ ಜೀವಸಂಕುಲವನ್ನು ಮುಂದುವರಿಸಲು ತತ್ತಿಯ ಮೇಲೆ ಕುಳಿತು ಕಾವು ನೀಡಿ ಮರಿಗಳನ್ನು ಹೊರಹೊಮ್ಮಿಸಿ ಅವುಗಳಿಗೆ ಪ್ರೀತಿಯಿಂದ ಆಹಾರವನ್ನು ನೀಡಿ ಪೋಷಿಸುವುದನ್ನು ಹಾಗೂ “ಕೂರ್ಮನ ಶಿಶುವಿಂಗೆ ಕೂರ್ಮೆಯಿಂದ” ಎನ್ನುವಲ್ಲಿ ಕೂರ್ಮ(ಆಮೆ)ವು, ಆಧುನಿಕ ವಿಜ್ಞಾನಿಗಳ ನಂಬಿಕೆಯಂತೆ ಸಾವಿರಾರು ಕಿಲೋಮೀಟರ್ ದೂರ ಕ್ರಮಿಸಿ ಸಮುದ್ರದ ತಟದಲ್ಲಿ ಮೊಟ್ಟೆಯಿಟ್ಟು ಮೂಲಸ್ಥಾನಕ್ಕೆ ಆಮೆಗಳು ಮರಳುತ್ತವೆ, ಇಲ್ಲಿ ನಿಗದಿತ ಸಮಯಕ್ಕೆ ಮೊಟ್ಟೆ ಒಡೆದು ಹೊರಬಂದ ಆಮೆಯ ಮರಿಗಳು ತಾಯಿಯನ್ನು ಸೇರುವ ತವಕದಲ್ಲಿ ಸಾಗರದಲ್ಲಿ ಪ್ರಯಾಣ ಬೆಳೆಸುತ್ತವೆ. ಆಗ ತಾಯಿಆಮೆಯ ನೆನಪೇ (ಕೂರ್ಮೆ=ಪ್ರೇಮ) ಮರಿಗಳಿಗೆ ಆಹಾರವಾಗಿ ಪರಿಣಮಿಸುತ್ತದೆ. ಭೂಮಿಮೇಲಿನ ಸಸ್ತನಿಗಳಿಗೆ ತಾಯಿಯ ಮೊಲೆ ಹಾಲು ಆಹಾರವೆಂದು ಹೇಳಿದ್ದಾರೆ, 12ನೇ ಶತಮಾನದಲ್ಲಿ ಆಕಾಶ, ಸಮುದ್ರ ಮತ್ತು ಭೂಮಿ ಮೇಲಿನ ಜೀವಸಂಕುಲಗಳ ಬಗ್ಗೆ ಸೂಕ್ಷ್ಮವಾಗಿ ಗಮನಿಸಿರುವುದನ್ನು ಈ ವಚನದಲ್ಲಿ ನಾವು ಕಾಣುತ್ತೇವೆ.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

# ಟಾಂಗಾದಲ್ಲಿ ಆಗಮಿಸಿದ ವಿಜಯಪುರ ಮೇಯರ್!

**ಉದಯರಶ್ಮಿ ನ್ಯೂಸ್**



ವಿಜಯಪುರ: ತಮಗೆ ಕೊಟ್ಟ ಹಳೆಯ ವಾಹನ ಹಳೆಯದಾಗಿದ್ದು ಹಾಗೂ ವಾಹನ ಚಾಲಕನನ್ನು ನೇಮಕ ಮಾಡದ ಕಾರಣ ವಿಜಯಪುರ ಮಹಾನಗರ ಪಾಲಿಕೆ ಮೇಯರ್


ಗುರುವಾರ ಟಾಂಗಾ ಮೂಲಕ ಸಾಮಾನ್ಯ ಸಭೆಗೆ ಆಗಮಿಸಿ ಗಮನ ಸೆಳೆದರು.

ಪಾಲಿಕೆಯಿಂದ ಹಳೆಯ ವಾಹನ ನೀಡಲಾಗಿದೆ. ಚಾಲಕನೂ ಇಲ್ಲದೇ ವಾಹನ ಹೇಗೆ ಉಪಯೋಗಿಸಬೇಕೆಂದು ಪ್ರಶ್ನಿಸಿದರು.

ನಮ್ಮದೇ ಸರ್ಕಾರವಿದ್ದರೂ ಪಾಲಿಕೆ ಮೇಯರನ್ನು ಉದಾಸೀನ ಮಾಡಲಾಗುತ್ತಿದೆ. ಇಲಾಖೆ ಪ್ರಧಾನ ಕಾರ್ಯದರ್ಶಿ ಗಮನಕ್ಕೆ ತಂದರೂ ಸ್ಪಂದಿಸಿಲ್ಲ ಎಂದು ಆರೋಪಿಸಿದರು.

ಮೇಯರ್ ನಡೆಗೆ ಸಾರ್ವಜನಿಕರ ಆಕ್ಷೇಪ ವ್ಯಕ್ತವಾಗಿದೆ. ಪಾಲಿಕೆಯ ನಿಮಯದಂತೆ ನೂತನ ವಾಹನ ಖರೀಧಿ ಮಾಡಲು ಹಾಗೂ ಬಾಡಿಗೆ ವಾಹನ ಪಡೆಯಲು ಅವಕಾಶವಿದೆ.

# ಹಣ್ಣೆಲೆ ಚಿಗುರಿದಾಗ




## ಭಾವರಶ್ಮಿ

– ಶೈಲಾ ಎಸ್. ವಾಲಿ

("ನಮ್ಮ ಕಥಾ ಅರಮನೆ" ಬರಹಗಾರರು)

ಉದಯರಶ್ಮಿ ದಿನಪತ್ರಿಕೆ


"ಹಾಯ್.... ಅವನಿ ಅವರೇ,

ನಾನು ಯಾರು ಅಂತ ನಿಮಗೆ ಗೊತ್ತಿಲ್ಲ, ಆದರೆ ನೀವ್ಯಾರು ಅಂತ ನನಗೆ ಗೊತ್ತು, ನೀವು ಅರುಂಧತಿ ಅವರ ಮಗಳು ಅಲ್ವಾ.... ನಾನು ಅವರ ಚೈಲ್ಡ್ ಹುಡ್ ಫ್ರೆಂಡ್ ಹಾಗೇ ಅವಳ ಕ್ಲಾಸ್ಮೇಟ್ ಸಹ ಆಗಿದ್ದೆ.

ನಾನು ನಿಮ್ಮತ್ರ ಸ್ವಲ್ಪ ಪರ್ಸನಲ್ ಮಾತಾಡುವುದಿದೆ, ನಾಳೆ ನಿಮ್ಮ ಕಾಲೇಜು ಹತ್ತಿರ ಇರುವ ಕಾಫಿ ಡೇ ಯಲ್ಲಿ ಸಿಗ್ತೀರಾ.. ಸಾಯಂಕಾಲ 5 ಗಂಟೆಗೆ ನಾನು ಅಲ್ಲಿ ಬರ್ತೀನಿ "... ದಯವಿಟ್ಟು ಈ ವಿಷಯವನ್ನು ಅರುಂಧತಿ ಹತ್ತಿರ ಹೇಳ್ಬೇಡಿ. ಪ್ಲೀಸ್ ಇಟ್ಸ್ ಮೈ ರಿಕ್ವೆಸ್ಟ್"......!

ಹೀಗೆ ಅವನಿ'ಯ ಇನ್ಬಾಕ್ಸ್ ನಲ್ಲಿ ಒಂದು ಮೆಸೇಜ್ ಬಂದಿತ್ತು, ಲ್ಯಾಪ್ಟಾಪ್ ಹಿಡ್ಕೊಂಡು ಏನೋ ಕೆಲಸ ಮಾಡ್ತಾ ಕೂತವಳಿಗೆ ಮೆಸೇಜ್ ಟ್ಯೂನ್ ಬಂದ ಕೂಡ್ಲೇ ಮೊಬೈಲ್ ತೆಗೆದು ಈ ಮೆಸೇಜ್ ನೋಡಿದ ಮೇಲೆ ತಲೆಯಲ್ಲಿ ಹುಳ ಬಿಟ್ಟಂತೆ ಆಗಿತ್ತು, ಇದ್ಯಾರು ಮನುಷ್ಯ, ಅಮ್ಮನಿಗೆ ಹೇಳ್ಬೇಡ ಅಂತಿದ್ದಾನೆ, ನನ್ನತ್ರ ಏನು ಇವನಿಗೆ ಪರ್ಸನಲ್ ವಿಷಯ ಇರುತ್ತೆ ಮಾತಾಡೋಕೆ "ಅಂತ ಅದನ್ನೇ ಯೋಚಿಸುತ್ತ ಮಲಗಿದವಳಿಗೆ ಗಾಢವಾದ ನಿದ್ದೆಯು ಆವರಿಸಿತ್ತು.

ಬೆಳಿಗ್ಗೆ ಅಮ್ಮ ಬಂದು...... ಏಳು ಪುಟ್ಟ, ನಾನು ಗಾರ್ಮೆಂಟ್ಸ್ ಗೆ ಇವತ್ತು ಬೇಗ ಹೋಗ್ಬೇಕು, ತುಂಬಾ ಆರ್ಡರ್ ಇವೆ, ಅದನ್ನೆಲ್ಲಾ ಇವತ್ತೇ ಕಂಪ್ಲೀಟ್ ಮಾಡಬೇಕು. ಬೇಗ ಏಳಮ್ಮ...... ಅಂತ ಎಬ್ಬಿಸುತಿದ್ದ ಅಮ್ಮನನ್ನು ನೋಡಿದಳು ಆಹಾ, ನನ್ನಮ್ಮ ಎಂಥ ಚೆಲುವೆ, ಈಗ್ಲೇ ಇಷ್ಟೊಂದು ಸುಂದರ ವಾಗಿರುವ ಅಮ್ಮ ಇನ್ನೂ ಹರೆಯದಲ್ಲಿ ಅದೆಂಥ ರೂಪಸಿ ಆಗಿರ್ಬೇಕು ಅಂತ ಯೋಚಿಸುತ್ತ ಗಟ್ಟಿಯಾಗಿ ಅಮ್ಮನನ್ನು ತಬ್ಬಿಕೊಂಡಳು,. ಅಮ್ಮ ನೀನೆಷ್ಟು ಚೆಂದ ಇದ್ದೀಯೇ..... ಅಲ್ಲ ಕಣೆ ಅಮ್ಮ ನಿಂಗೇಷ್ಟು ಹುಡುಗರು ಲೈನ್ ಹಾಕ್ತಿದ್ರೆ ಕಾಲೇಜ್ ಲ್ಲಿ ಇರುವಾಗ..... ಕಾಲೇಜು ನಲ್ಲಿ ನೀನೇ ಕ್ವೀನ್ ಇರಬೇಕು ಅಲ್ವಾ ಅಂತ ಕಾಡಿಸಿದಾಗ ನಾಚಿ ಮುಖ ಕೆಂಪು ಮಾಡ್ಕೊಂಡು....."ಅವನಿ, ಸಾಕು ಏಳು ಇನ್ನೂ, ಬೆಳಿಗ್ಗೆ ಬೆಳಿಗ್ಗೆನೇ ನಿಂಗೇನು ಶುರು ವಾಯ್ತು ಅಂತ ಹುಸಿ ಮುನಿಸು ತೋರುತ್ತ ಒಳಗೆ ನಡೆದಳು.

ಇತ್ತ ಬೇಗ ರೆಡಿಯಾಗಿ ಕಾಲೇಜ್ ಗೆ ಹೋದ ಅವನಿಗೆ ಸರಿಯಾಗಿ ಕ್ಲಾಸ್ ತೆಗೆದುಕೊಳೋಕೆ ಆಗದೇ ಸಾಯಂಕಾಲ ಯಾವಾಗ ಆಗುತ್ತೋ, ಯಾವಾಗ ಆ ಮನುಷ್ಯ ನನ್ನು ಭೇಟಿ ಆಗ್ತಿನೋ, ಇದರ ಹಿಂದಿನ ಉದ್ದೇಶ ವೇನು ಅಂತ ತಲೆ ಕೆಡಿಸಿಕೊಳ್ಳುತ್ತ ಬೇರೆ ಯಾವುದರಲ್ಲಿಯೂ ಆಸಕ್ತಿಯೇ ಇಲ್ಲದಂತಾಗಿತ್ತು.....!

ಅಂತೂ ಸಮಯಕ್ಕೆ ಸರಿಯಾಗಿ ಕಾಫಿ ಡೇ ಗೆ ಬಂದ ಅವನಿಯನ್ನು ಮೊದಲೇ ಬಂದು ಸೀಟ್ ರಿಸರ್ವ್ ಮಾಡಿ ಕಾಯುತಿದ್ದ ಮನುಷ್ಯ ಈಕೆಯನ್ನು ನೋಡುತ್ತಲೇ ಹಾಯ್ ಅವನಿ ಇಲ್ಲಿ ಬನ್ನಿ ಅಂತ ಕರೆದರು. ಸುಂದರವಾದ ಆಕರ್ಷಕ ವ್ಯಕ್ತಿತ್ವ ದ ವ್ಯಕ್ತಿ ನೋಡಿದೊಡೆ ಮನಸು ಒಂದು ಕ್ಷಣ ಹಾಯ್ ಹ್ಯಾಂಡ್ ಸಮ್ ಅಂದಿತ್ತು,



ಆರಡಿ ಉದ್ದದ ನಿಲುವು, ಆಕರ್ಷಕ ಕಣ್ಣುಗಳು, ವಯಸ್ಸು 50 ದಾಟಿದರೂ ಕಡಿಮೆ ಆಗದ ಉತ್ಸಾಹ, ಪೊದೆ ಮೀಸೆಯ ಅಡಿಯಲ್ಲಿ ಮಿನುಗುವ ಸುಂದರ ನಗು, ಡೈ ಹಚ್ಚಿದರೂ ಹಚ್ಚದಂತಿರುವ ಪೊದಗಸ್ತಾದ ಕೂದಲು.... ನನ್ನಮ್ಮ ನಂತೆ ಇವರು ಚೆಲುವ ಚೆನ್ನಿಗ, ಅಂತ ಮನಸಲ್ಲೇ ಅಂದುಕೊಳ್ಳುತ್ತ ಹಾಯ್ ಸರ್ ಅಂತ ಶೇಕ್ ಹ್ಯಾಂಡ್ ಮಾಡಿದ ಅವನಿ'ಯನ್ನು ಕುಳಿತುಕೊಳುವಂತೆ ಸನ್ನೆ ಮಾಡಿ ಮುಗಳ್ನಕ್ಕ ವ್ಯಕ್ತಿ ಮೊದಲ ನೋಟದಲ್ಲೇ ತುಂಬಾ ಆತ್ಮೀಯ ಎನಿಸಿದರು.

ವೇಯ್ಟರ್ ನ ಕರೆದು ಅವನಿ'ಯ ಇಚ್ಛೆಯಂತೆ ಕಾಫೀ ಆರ್ಡರ್ ಮಾಡಿ ಪರಸ್ಪರ ಪರಿಚಯ ಮಾಡಿಕೊಂಡರು.

ಅವನಿ.... ತುಂಬಾ ಚೆಂದದ ಹೆಸರು, ಏನು ಮಾಡ್ಕೊಂಡು ಇದ್ದೀಯಮ್ಮ ನೀನು...?

ಸರ್, ನಾನು ಇಲ್ಲೇ ಒಂದು ಇಂಜಿನಿಯರ್ ಕಾಲೇಜ್ ನಲ್ಲಿ ಲೆಕ್ಚರರ್ ಆಗಿದ್ದೀನಿ...

ಓಹ್ ಹೌದ... ಗುಡ್, ಒಳ್ಳೆ ಪ್ರೊಫೆಷನಲ್ ನಲ್ಲಿ ಇದ್ದೀಯ, ಕ್ಯಾರಿ ಆನ್....

ಅರುಂಧತಿ.. ಹೇಗಿದ್ದಾರೆ, ಚೆನ್ನಾಗಿದ್ದಾಳಾ...?

ಹುಂ ಸರ್... ಅಮ್ಮ ಒಂದು ಗಾರ್ಮೆಂಟ್ಸ್ ನಲ್ಲಿ ಸೂಪರ್ವೈಸರ್ ಆಗಿ ಕೆಲಸ ಮಾಡ್ತಿದ್ದಾಳೆ, ಈಗ ಆರಾಮ ಆಗಿರು, ನಾನು ಸಂಪಾದನೆ ಮಾಡ್ತೀನಿ ಅಂದ್ರು ಕೇಳಲ್ಲ ಸರ್, ತುಂಬಾ ಸ್ವಾಭಿಮಾನ ಅಮ್ಮ ನಿಗೆ, ಅಂದಾಗ ಅಶೋಕ್, ಹೌದು, ಆಕೆ ಮೊದಲಿನಿಂದಲೂ ಹಾಗೇ ಇರೋದು, ತುಂಬಾ ಸಂಕೋಚದ ಸ್ವಭಾವ.

" ನೋಡಮ್ಮ, ಅವನಿ ನಿನಗೆ ಸ್ವಲ್ಪ ಕಸಿವಿಸಿ ಆಗಿರಬಹುದು ಇವರ್ಯಾರು, ನನ್ನ ಏಕೆ ಮೀಟ್ ಆಗೋಕೆ ಬಂದಿದ್ದಾರೆ ಅಂತ ನಿನ್ನ ಕುತೂಹಲಕ್ಕೆ ಬ್ರೇಕ್ ಹಾಕ್ತಿನಿ, ಜಾಸ್ತಿ ನಿನ್ನ ಕಾಯಿಸದೆ ವಿಷಯ ಹೇಳ್ತೀನಿ, ನಾನು ನೇರ ನುಡಿಯ ವ್ಯಕ್ತಿ, ನಿಂಗೆ ಇರುಸು ಮುರುಸು ಆಗುತ್ತೇನೋ ಗೊತ್ತಿಲ್ಲ... ಆದರೆ ನಂಗೆ ವಿಷಯ ನಿನ್ನತ್ರ ಹೇಳ್ಬೇಕು ಅಷ್ಟೇ...... ಅಂದಾಗ,......

ಸರ್ ಪರವಾಗಿಲ್ಲ ಹೇಳಿ, ನಾನು ಸಹ ಬ್ರೇವ್ ಅಂಡ್ ಬೋಲ್ಡ್ ಗರ್ಲ್,ನೀವು ಏನು ಸಂಕೋಚ ಪಡದೇ ವಿಷಯ ಹೇಳಿ ... ಅಂದಾಗ

ನೋಡಮ್ಮ ನನ್ನ ಹೆಸರು ಅಶೋಕ್ ಅಂತ ಕಳೆದ 30 ವರ್ಷ ದಿಂದ ಅಮೇರಿಕಾ ದಲ್ಲಿದ್ದು ಈಗ ಒಂದು ತಿಂಗಳು ಆಯ್ತು ಇಲ್ಲಿ ಬಂದು, ಈಗ ಇಲ್ಲಿಂದ ಹೋಗೋಕೆ ಮನಸು ಬರ್ತಿಲ್ಲ, ಎಷ್ಟೇ ಆದರೂ ನಮ್ಮೂರು, ನಮ್ಮ ನೆಲ ನಮಗೆ ಹೆಚ್ಚು ಅಲ್ವಾ, ನಾನು ನಿನ್ನಮ್ಮ ಒಂದೇ ಶಾಲೆಯಲ್ಲಿ ಒಂದನೇ ತರಗತಿ ಯಿಂದ ದ್ವಿತೀಯ ಪಿಯುಸಿ ತನಕ ಓದಿದವರು, ನಿನ್ನಮ್ಮ ತೀರಾ ಸಂಕೋಚ ಸ್ವಭಾವ ದ ಹುಡುಗಿಯಾಗಿದ್ದಳು, ಹೆಚ್ಚಾಗಿ ಯಾರೊಂದಿಗೂ ಬೆರೆಯುತ್ತಿರಲಿಲ್ಲ, ತನ್ನಷ್ಟಕ್ಕೆ ತಾನು ಇರುತ್ತಿದ್ದ ಹುಡುಗಿ, ಸಣ್ಣ ವಯಸ್ಸಲ್ಲೇ ಆಕೆಯ ಮೇಲೆ ಒಂದು ವಿಚಿತ್ರ ಆಕರ್ಷಣೆ ಬೆಳೆಸಿಕೊಂಡಿದ್ದ ನನಗೆ ಬರು ಬರುತ್ತಾ ಅದು ಪ್ರೀತಿಯಾಗಿ ತಿರುಗಿದ್ದು ಸಹ ಅರಿವಾಗಲಿಲ್ಲ,......! ಏಕೆಂದರೆ ಆಕೆಯೊಂದಿಗೆ ಏನೂ ಹೇಳಿಯೇ ಇರಲಿಲ್ಲಾ, ಮನಸ್ಸಿನಲ್ಲಿಯೇ ಆಕೆಗೊಂದು ಗುಡಿ ಕಟ್ಟಿ ಅಲ್ಲಿಯೇ ಆರಾಧಿಸುತಿದ್ದ ನನಗೆ ಆಕೆಯ ಬಳಿ ಹೇಳುವ ಪ್ರಮೇಯ ವೇ ಬರಲಿಲ್ಲ,

ಏಕೆಂದರೆ ಇದು ನನ್ನ ಹೊರತು ಬೇರೆ ಯಾರಿಗೂ ಗೊತ್ತಿರದ ವಿಷಯ ವಾಗಿತ್ತು, ಎಷ್ಟೋ ಸಲ ನಿನ್ನಮ್ಮ ನಿಗೆ ಹೇಳಬೇಕೆಂದು ಕೊಂಡರೂ ಅವಳ ಮುಗ್ದತೆ, ಸಂಕೋಚ ದ ಸ್ವಭಾವ ನನ್ನನ್ನು ಕಟ್ಟಿ ಹಾಕುತಿತ್ತು. ಆಮೇಲೆ ಆಕೆ ಕಾಲೇಜ್ ಗೆ ಬರೋದನ್ನೇ ಬಿಟ್ಟು ಬಿಟ್ಟಳು, ಯಾಕೆ ಅಂತ ಅಲಲ್ಲಿ ವಿಚಾರ ಮಾಡಿದಾಗ ಗೊತ್ತಾಗಿದ್ದು ಆಕೆಯ ತಾಯಿಗೆ ಕ್ಯಾನ್ಸರ್ ಆಗಿ ಸೀರಿಯಸ್ ಇದ್ದಾರೆ ಅಂತ, ಆಮೇಲೆ ಏಕಾಏಕಿ ತಿಳಿದ ಸುದ್ದಿ ಅವಳ ಸೋದರ ಮಾವನೊಂದಿಗೆ ಮದುವೆಯು ಆಗಿದ್ದು......ಇದು ನನ್ನನ್ನು ತೀರಾ ಪಾತಾಳ ಕ್ಕೆ ದೂಡಿದ ವಿಷಯ ವಾಗಿತ್ತು, ನನ್ನನ್ನು ನಾನು ಸುಧಾರಿಸಿ ಕೊಳ್ಳೋಕೆ ಸಾಕಷ್ಟು ಸಮಯ ಬೇಕಾಯ್ತು, ನಂತರ ನನ್ನ ಅಪ್ಪ ನನ್ನ ಪರಿಸ್ಥಿತಿ ನೋಡಲಾಗದೆ ಬೇರೆಡೆ ಟ್ರಾನ್ಸರ್ ಮಾಡಿಸಿಕೊಂಡು ನನ್ನ ಮನಸು ಬದಲಾವಣೆ ಮಾಡೋಕೆ ಪ್ರಯತ್ನ ಪಟ್ಟರು. ಆದರೆ ಈ ನನ್ನ ಪ್ರೀತಿ ಉಸುಕಿ ನ ಮೇಲೆ ಬರೆದ ಅಕ್ಷರ ವಾಗಿರದೇ ಹಸಿ ಗೋಡೆಯ ಮೇಲೆ ಕೆತ್ತಿದ ಚಿತ್ರ ದಂತಾಗಿತ್ತು, ಎಷ್ಟೋ ಪ್ರಯತ್ನ ಪಟ್ಟರು ಮರೆಯಲಾಗದ ಪ್ರೀತಿ ನನ್ನಲ್ಲೇ ಹಾಗೆಯೇ ಉಳಿದು ಬಿಟ್ಟಿತ್ತು.ಇದಕ್ಕಾಗಿ ನಾನೆಷ್ಟು ಪರಿತಪಿಸಿದ್ದೇನೆ,ಜೀವನ ದಲ್ಲಿ ಮುಂದೆಂದೂ ಪ್ರೀತಿ ಅನ್ನೋದು ಹುಟ್ಟೋದೆ ಇಲ್ಲ ಅಂದ್ಕೊಂಡ ನನಗೆ ಅಪ್ಪನ ಗೆಳೆಯನ ಮಗಳೊಂದಿಗೆ ಮದುವೆಯನ್ನು ಸಹ ಮಾಡಿದರು, ಆದರೆ ಈ ಸಂಬಂಧವೂ ತಿಂಗಳಲ್ಲೇ ಮುರಿದು ಬಿತ್ತು.ಏಕೆಂದರೆ ಆಕೆಗೆ ಮೊದಲೇ ಬೇರೆಯವರೊಂದಿಗೆ ಪ್ರೀತಿ ಇತ್ತು, ಅದನ್ನು ಮನೆಯಲ್ಲಿ ಹೇಳಲು ಆಗದೇ ನನ್ನ ಮದುವೆ ಆಗಿದ್ದಳು, ಆದರೆ ನನ್ನೊಂದಿಗೆ ಒಂದು ದಿನವೂ ಸಂತೋಷ ಹಂಚಿಕೊಳ್ಳದ ಆಕೆಯನ್ನು ನಾನೇ ಸಮಾಧಾನ ವಾಗಿ ಮಾತಾಡಿ ಕೇಳಿದಾಗ ತನ್ನ ನೋವನ್ನು ಹಂಚಿಕೊಂಡಳು, ಪ್ರೀತಿಸಿದ ಜೋಡಿಯನ್ನು ಅಗಲಿಸಬಾರದೆಂದು ನಾನೇ ಅವರ ಮನೆಯಲ್ಲಿ ಮಾತಾಡಿ ಆ ಹುಡುಗನ ಜೊತೆಗೂ ಎಲ್ಲ ವಿವರಿಸಿ ಕೊನೆಗೆ ಅವರಿಬ್ಬರನ್ನು ಒಂದು ಮಾಡಿ ಅಮೇರಿಕಾ ಗೆ ಹೋಗಿ ಸೆಟ್ಟಲ್ ಆಗಿಬಿಟ್ಟೆ. ಸಾಕಷ್ಟು ನೊಂದಿದ್ದ ನನಗೆ ಜೀವನ ವೇ ಬೇಡ ಅನ್ನಿಸಿ ಬಿಟ್ಟಿತ್ತು, ಆದರೆ ತಂದೆ ತಾಯಿಗೆ ನೋವು ಮಾಡಿ ಸಾಯೋಕೆ ಇಚ್ಚಿಸದೇ ಅವರಿಗಾಗಿ ನನ್ನ ನೋವನ್ನೆಲ್ಲ ಮರೆತು ನಗುವಿನ ಮುಖವಾಡ ಹಾಕಿ ಮುಂದೆದೂ ಪ್ರೀತಿ ಪ್ರೇಮ ಅಂತ ತಲೆ ಕೆಡಿಸಿಕೊಳ್ಳದೇ ನನ್ನದೇ ಸ್ವಂತ ಕಂಪನಿ ಸ್ಟಾರ್ಟ್ ಮಾಡಿ ಸಾಕಷ್ಟು ಹಣ ಹೆಸರು ಸಂಪಾದನೆ ಮಾಡಿದೆ. ಸಂಸಾರ ಸುಖ ಒಂದು ಬಿಟ್ಟು ಬೇರೆಲ್ಲಾ ಸಿರಿ ಸಂಪತ್ತು ನನಗಿತ್ತು, ಇತೀಚೆಗೆ ತಂದೆ ತಾಯಿಯನ್ನು ಕಳೆದುಕೊಂಡ ನನಗೆ ಜೀವನವೇ ಬೇಸರ ಆಗಿ ಬಿಟ್ಟಿತ್ತು, ಆಗ ನನ್ನ ಕ್ಲಾಸ್ಮೇಟ್ ಒಬ್ಬರು ನಮ್ಮ ಶಾಲೆಯ ರಿ ಯುನಿಯನ್ ಹಳೇ ವಿದ್ಯಾರ್ಥಿಗಳ ಸ್ನೇಹ ಕೂಟ ಏರ್ಪಡಿಸಲಾಗಿದೆ, ದಯವಿಟ್ಟು ಎಲ್ಲರೂ ಬರ್ತಿದ್ದಾರೆ, ನೀನು ಬರಲೇಬೇಕು ಅಂತ ಕೇಳಿಕೊಂಡಾಗ ಬರದೇ ಇರಲಾಗಲಿಲ್ಲ, ನಿನ್ನಮ್ಮ ಬರುತ್ತಾರೆ, ಈಗಲಾದರೂ ಆಕೆಯನ್ನು ನೋಡಬಹುದು ಎಂಬ ಆಸೆ ಇಟ್ಕೊಂಡು ಬಂದೆ, ಆದರೆ ಅಲ್ಲಿ ಬಂದ್ಮೇಲೆ ಗೊತ್ತಾಗಿದ್ದು ನಿನ್ನಮ್ಮ ವಿಧವೆ ಆಗಿದ್ದಾಳೆ, ಮದುವೆ ಯಾಗಿ ಐದು ವರ್ಷಕ್ಕೆ ಗಂಡ ಹೋಗಿ ಬಿಟ್ಟಿದ್ದಾರೆ ಅಂತ.


ಆಮೇಲೆ ನನ್ನ ಮನಸಲ್ಲಿ ಒಂದು ಹೊಸ ಆಸೆ ಚಿಗುರೊಡೆಯಿತು, ಇಷ್ಟೂ ವರುಷ ದೂರ ಇದ್ದ ನಾವಿಬ್ಬರು ಈಗ್ಯಾಕೆ ಒಂದಾಗಿ ಬಾಳ ಬಾರದು ಅಂತ, ಈಗ ನಮ್ಮಿಬ್ಬರಿಗೂ ವಯಸ್ಸು ಮೀರಿದೆ, ಆದರೆ ಮನಸ್ಸಲ್ಲಿ ಪ್ರೀತಿ ಹಾಗೇ ಇದೆ, ನಾನು ಪ್ರೀತಿಸ್ತೀದ್ದೇನೆ ಅಂತ ನಿನ್ನಮ್ಮ ನಿಗೂ ನನ್ನ ಪ್ರೀತಿಸಲೇ ಬೇಕೆಂದು ಒತ್ತಾಯ ಮಾಡುತ್ತಿಲ್ಲ, ನೀನು ಒಬ್ಬ ಹೆಣ್ಣು ಮಗಳು, ನಾಳೆ ನಿನಗೂ ಒಂದು ಮದುವೆ ಆಗಿ ಗಂಡನ ಮನೆಗೆ ಹೋದಾಗ ನಿನ್ನಮ್ಮ ಒಂಟಿ ಆಗಿ ಬಿಡ್ತಾಳೆ, ನಾನು ಅವಳಿಗೆ ಆಸರೆಯಾಗಿ, ಒಳ್ಳೆಯ ಸಂಗಾತಿ ಯಾಗಿ ಇರಬಲ್ಲೆ, ದೈಹಿಕವಾಗಿ ನಾವಿಬ್ಬರು ಒಂದಾಗದಿದ್ದರೂ ಮಾನಸಿಕವಾಗಿ ಒಬ್ಬರಿಗೊಬ್ಬರು ಆಸರೆಯಾಗಿ ಇರಬಹುದು ಅಲ್ವಾ,

ಇದಕ್ಕೆ ನಿಮ್ಮ ಅಭಿಪ್ರಾಯ ಏನು...? ನೀವು ಒಬ್ಬ ಇಂಡಿಪೆಂಡೆಂಟ್ ಹುಡುಗಿಯಾಗಿ ಒಬ್ಬ ಒಳ್ಳೆ ಮಗಳಾಗಿ ನಿನ್ನ ಅಮ್ಮನ ಬಗ್ಗೆ ಏನು ಹೇಳ್ತಿಯ, ಆಕೆಯ ಭವಿಷ್ಯ ದ ಬಗ್ಗೆ ನಿನ್ನ ಅಭಿಪ್ರಾಯವೇನು.? ಇದರಲ್ಲಿ ಯಾವುದೇ ಒತ್ತಾಯವಿಲ್ಲ, ಹಾಗಾಗಿ ನಾನು ಮೊದಲು ನಿಮ್ಮ ಅಭಿಪ್ರಾಯ ಕೇಳಿದ್ದು, ನಾನು ಈ ವಿಷಯ ಅರುಂಧತಿ ಹತ್ತಿರ ಮಾತಾಡಿಲ್ಲ, ಇನ್ ಫ್ಯಾಕ್ಟ್ ಆಕೆ ನನಗೆ ಸಿಕ್ಕಿಯೇ ಇಲ್ಲ, ಸ್ನೇಹ ಕೂಟಕ್ಕೆ ಆಕೆ ಬರಲೇ ಇಲ್ಲ, ನಾನು ಬಂದಿದ್ದೇ ಆಕೆಯನ್ನು ನೋಡುವ ಉದ್ದೇಶದಿಂದ, ಅಲ್ಲಿ ಬೇರೆ ಫ್ರೆಂಡ್ಸ್ ನಿಂದ ಆಕೆಯ ಬಗ್ಗೆ ತಿಳಿಯಿತು.ದಯವಿಟ್ಟು ಅವನಿ.... ನೀವು ನನ್ನ ಮನಸ್ಸನ್ನು ಅರ್ಥ ಮಾಡಿಕೊಳ್ತೀರಾ ಅಂತ ಭಾವಿಸ್ತೀನಿ.

ಈ ವಿಷಯ ದಲ್ಲಿ ನನಗೆ ಒಳ್ಳೆ ಫಲಿತಾಂಶ ವನ್ನೇ ಕೊಡುತ್ತೀರಾ ಅಂತ ನಂಬಿದ್ದೇನೆ. ದಯವಿಟ್ಟು ನನಗೆ ನಿರಾಸೆ ಮಾಡ್ಬೇಡಿ "ಅಂತ ಹೇಳಿ ಕೈ ಮುಗಿದ ಅಶೋಕ್ ನನ್ನು ನೋಡಿದ

ಅವನಿ'ಗೆ ಏನೂ ಹೇಳೋಕೆ ತೋಚದೆ ನನಗೆ ಸ್ವಲ್ಪ ಸಮಯ ಕೊಡಿ, ಅಮ್ಮನತ್ರ ಮಾತಾಡಿ ನಿಮಗೆ ಹೇಳ್ತೀನಿ ಅಂತ ಹೇಳಿ ಕಾಫಿ ಕುಡಿದು ಶೇಕ್ ಹ್ಯಾಂಡ್ ಮಾಡಿ ಪರಸ್ಪರ ಫೋನ್ ನಂಬರ್ ಎಕ್ಸ್ಚೇಂಜ್ ಮಾಡಿಕೊಂಡು ಹೊರಟ.

ಅವನಿಯ ಮನಸಿನ ತುಂಬೆಲ್ಲ ಅಶೋಕ್ ನ ಮಾತುಗಳೇ ತುಂಬಿದ್ದವು,.




ಅಲ್ಲಿಂದ ಕ್ಯಾಬ್ ಬುಕ್ ಮಾಡಿಕೊಂಡು ಮನೆ ಕಡೆಗೆ ಹೊರಟ ಅವನಿ ಅಮ್ಮನ ಕೆಲವು ಫ್ರೆಂಡ್ಸ್ ಜೊತೆಗೆ ಅಶೋಕ್ ಬಗ್ಗೆ ಸೂಕ್ಷ್ಮ ವಾಗಿ ವಿಚಾರಣೆ ಮಾಡಿದಳು, ಎಲ್ಲರೂ ಅವನೊಬ್ಬ ಜೆಂಟಲ್ ಮ್ಯಾನ್, ಸಾಕಷ್ಟು ಸ್ಥಿತಿ ವಂತ, ಹೃದಯವಂತ ಅಂತೆಲ್ಲಾ ಒಳ್ಳೆಯ ಮಾತನ್ನೇ ಹೇಳಿದರು... ತಾನು ಎಫ್ ಬಿ ಯಲ್ಲಿ ಅವರ ಪ್ರೊಫೈಲ್ ಚೆಕ್ ಮಾಡಿ ಅವರ ಬಗ್ಗೆ ಸಾಕಷ್ಟು ತಿಳಿದುಕೊಂಡಳು.

ನನ್ನಮ್ಮ ಜೀವನದಲ್ಲಿ ಯಾವ ಖುಷಿ ಯನ್ನು ನೋಡಿಲ್ಲ, ದೇವರು ಆಕೆಗೆ ಸುಂದರವಾದ ರೂಪ ಕೊಟ್ಟ ಆದರೆ ಹಣೆಬರಹ ಸುಂದರವಾಗಿ ಬರಿಯಲಿಲ್ಲ, ಸಣ್ಣ ವಯಸ್ಸಲ್ಲಿ ವಿಧವೆಯಾಗಿ ಈ ಸಮಾಜದಲ್ಲಿ ನನ್ನ ಇಷ್ಟು ಒಳ್ಳೆ ರೀತಿಯಲ್ಲಿ ಬೆಳೆಸೋಕೆ ಪಟ್ಟ ಕಷ್ಟ ಅಷ್ಟಿಷ್ಟಲ್ಲ, ಆ ದೇವರು ಈಗಲಾದರೂ ಆಕೆಯ ಜೀವನದಲ್ಲಿ ಖುಷಿ ಯನ್ನು ಕೊಡುತ್ತಿರುವಾಗ ನಾನೇಕೆ ಅದಕ್ಕೆ ಕಲ್ಲು ಹಾಕಬೇಕು, ಈ ಜೀವನ ಇರೋದು ಒಂದೇ ಒಂದು ಬಾರಿ, ಅರ್ಧ ಬದುಕು ದುಃಖ ಕಷ್ಟ ದಲ್ಲೇ ಕಳೆದಿರುವಾಗ ಈಗ್ಲಾದರೂ ಸಂತೋಷ, ನೆಮ್ಮದಿ ಅರಸಿಕೊಂಡು ಬಂದಿರುವಾಗ ನಾನೇಕೆ ಅದನ್ನು ದೂರ ತಳ್ಳಬೇಕು, ಇಲ್ಲ, ನಾನಿದನ್ನು ಈ ಅವಕಾಶವನ್ನು ಅಮ್ಮನಿಂದ ದೂರ ಮಾಡಬಾರದು, ಹೇಗಾದರೂ ಮಾಡಿ ಅಮ್ಮನನ್ನು ಒಪ್ಪಿಸಿ ಅಶೋಕ್ ಅವರ ಜೊತೆಗೆ ಮದುವೆ ಮಾಡಿಸಿ ಅವರಿಬ್ಬರೂ ಒಂದಾಗುವಂತೆ ಮಾಡಬೇಕು ಅಂತೆಲ್ಲಾ ಯೋಚಿಸುತ್ತ ಇರುವವಳಿಗೆ ಮನೆ ಬಂದಿದ್ದು ತಿಳಿಯಲಿಲ್ಲ, ಕ್ಯಾಬ್ ನವನಿಗೆ ದುಡ್ಡು ಕೊಟ್ಟು ಮನೆ ಒಳಗೆ ಬಂದಾಗ ಅಮ್ಮ ಅಡುಗೆ ಮನೆಯಲ್ಲಿ ಏನೋ ಮಾಡುತ್ತ ಇರೋದು ಕಾಣಿಸಿ ಹಿಂದಿನಿಂದ ಹೋಗಿ ಆಕೆಯನ್ನು ಗಟ್ಟಿಯಾಗಿ ತಬ್ಬಿಕೊಂಡು ಅಮ್ಮ ನನ್ನ ಮುದ್ದು ಅಮ್ಮ ಅಂತ ಗಲ್ಲಕ್ಕೆ ಮುತ್ತು ಇಟ್ಟಾಗ ಅರುಂಧತಿ ಏನೇ ಇದು ಅವನಿ ಸಣ್ಣ ಹುಡುಗಿ ತರ ಮಾಡ್ತಿಯಾ, ಹೋಗಿ ಫ್ರೆಷ್ ಆಗಿ ಬಾ ಕಾಫಿ ಬೆರ್ಸಿ ಕೊಡ್ತೀನಿ ಅಂತ ಆಕೆಯಿಂದ ಕೊಸರಿಕೊಂಡು ಹಾಲು ಬಿಸಿ ಮಾಡತೊಡಗಿದಳು.

ಫ್ರೆಷ್ ಆಗಿ ಬಂದ್ ಅವನಿ ಬಿಸಿ ಕಾಫಿ ಹೀರುತ್ತಾ ಅಮ್ಮನ ಕಡೆಗೆ ಒಮ್ಮೆ ನೋಡಿದಳು, ಗುಲಾಬಿ ಬಣ್ಣದ ಕಾಟನ್ ಸೀರೆಯಲ್ಲಿ ಗುಲಾಬಿ ಹೂವಿನಂತೆ ಕಾಣುತ್ತಿದ್ದ ಅಮ್ಮನ ಕಂಡು ಹೆಮ್ಮೆ ಅನಿಸಿತು ಆಕೆಗೆ, ಎಷ್ಟು ಚೆಂದ ಇದ್ದಾಳೆ ನನ್ನಮ್ಮ ಅಂತ.

ಇನ್ನೂ ಈ ವಿಷಯ ಹೇಗೆ ಪ್ರಸ್ತಾಪ ಮಾಡೋದು ಅಂತ ವಿಚಾರ ಮಾಡ್ತಾ "ಅರು, ನನ್ನ ಫ್ರೆಂಡ್ ಅಮ್ಮ ಒಬ್ಬರು ಈಗ ಮದ್ವೆ ಆಗ್ತಿದ್ದಾರೆ, ಇದರ ಬಗ್ಗೆ ನಿನ್ನ ಅಭಿಪ್ರಾಯ ಏನಮ್ಮ ಅಂದಾಗ, ಯಾವ ಫ್ರೆಂಡ್ ಅದು, ಯಾರು ಅವರಮ್ಮ, ಅವರ್ಯಾಕೆ ಈಗ ಮದ್ವೆ ಆಗ್ತಿದ್ದಾರೆ, ಏನೇ ಒಗಟಾಗಿ ಮಾತಾಡ್ತೀಯಾ, ಏನು ಅಂತ ಸರಿಯಾಗಿ ಹೇಳು "ಅಂದಾಗ ಏನಿಲ್ಲ ಕಣೆ ಅರು, (ಅವನಿ, ಆಗೊಮ್ಮೆ ಈಗೊಮ್ಮೆ ಪ್ರೀತಿಯಿಂದ ಅಮ್ಮನನ್ನು ಅರು ಅಂತ ಕರೀತಿದ್ಲು ) ನನ್ನ ಫ್ರೆಂಡ್ ಅಪ್ಪ 20 ವರ್ಷದ ಹಿಂದೆಯೇ ಹೋಗ್ಬಿಟ್ಟಿದ್ದಾರೆ, ನನ್ನ ಫ್ರೆಂಡ್ ಒಬ್ಬಳೇ ಮಗಳು, ಅವಳು ತಾನು ಮದ್ವೆ ಆದರೆ ಅಮ್ಮ ಒಂಟಿ ಆಗ್ತಾರೆ ಅಂತ ಅವರಮ್ಮನಿಗೆ ಮದ್ವೆ ಮಾಡ್ತಿದ್ದಾಳೆ... ಇದು ಒಂತರ ಒಳ್ಳೆ ಯೋಚನೆ ಅಲ್ವಾ ಅರು "ಅಂದಾಗ...... ಅಲ್ಲಾ ಕಣೆ ಅವಳು ಮದ್ವೆ ಆಗಿ ಹೋಗ್ತಾಳೆ ಅಂತ ಅಮ್ಮನಿಗೆ ಈ ವಯಸ್ಸಲ್ಲಿ ಯಾರ ಜೊತೆಗೆ ಮದ್ವೆ ಮಾಡಿಸ್ತೀದ್ದಾಳೆ, ಅವನ್ಯಾರೋ ಏನೋ, ಯಾವ ಉದ್ದೇಶ ಇಟ್ಕೊಂಡು ಹೀಗೆ ಮದ್ವೆ ಆಗ್ತಾನೆ ಎಲ್ಲ ವಿಚಾರ ಮಾಡಬೇಕು ಅಲ್ವಾ, ಮದ್ವೆ ಅನ್ನೋದು ಹುಡುಗಾಟ ಅಲ್ಲ ಅವನಿ ".... ಅಮ್ಮ, ಆ ತರ ಏನೂ ಇಲ್ಲ, ಅವರು ಒಳ್ಳೆಯವರೇ, ಅವರಿಗೂ ಯಾವ ಸಂಸಾರನೂ ಇಲ್ಲ, ಸಾಕಷ್ಟು ಆಸ್ತಿ ಅಂತಸ್ತು ಎಲ್ಲ ಇದೆ, ಆದರೆ ಒಬ್ಬಂಟಿಯಾಗಿ ಇದ್ದರು ಅಷ್ಟೇ, ಈಗ ಇವಳಮ್ಮನನ್ನು ನೋಡಿ ಮದ್ವೆ ಆಗ್ತೀನಿ ಅಂದಿದ್ದಾರೆ, ಇದರ ಬಗ್ಗೆ ನಿನ್ನ ಅಭಿಪ್ರಾಯ ಏನು...? ಅಂದಾಗ ಅವರಿಬ್ಬರೂ ಒಪ್ಪಿದರೆ ಆಯ್ತು, ಅವರ ಮನೆಯಲ್ಲಿ, ಸಂಬಧಿಕರು ಎಲ್ಲ ಏನು ಹೇಳ್ತಾರೆ, ಎಲ್ಲರೂ ಒಪ್ಪಿಗೆ ಕೊಟ್ಟರೇ ಆಗೋದ್ರಲ್ಲಿ ಏನು ತಪ್ಪಿಲ್ಲ, ಇಬ್ಬರು ಒಬ್ಬಂಟಿಯಾಗಿ ಇರುವ ಬದಲು ಜಂಟಿಯಾಗಿ ಒಬ್ಬರಿಗೊಬ್ಬರು ಆಸರೆಯಾಗಿ ಇರ್ತಾರೆ ಅಷ್ಟೇ "ಈ ಮಾತು ಕೇಳಿ ಅವನಿ ಅಮ್ಮನನ್ನು ಗಟ್ಟಿಯಾಗಿ ಹಿಡ್ಕೊಂಡು ಮುತ್ತಿನ ಸುರಿಮಳೆಯನ್ನೇ ಸುರಿಸಿದ್ಲು, ಅಂತೂ ಅಮ್ಮ ಗ್ರೀನ್ ಸಿಗ್ನಲ್ ಕೊಟ್ಲು ಅಂತ......!

ಕೂಡಲೇ ಹೋಗಿ ಅಶೋಕ್ ಅವರ ವಾಟ್ಸಪ್ಪ್ ಗೆ ಒಂದು ಮೆಸೇಜ್ ಹಾಕಿದ್ಲು, "ನಾಳೆ ನೀವು ನಮ್ಮ ಮನೆಗೆ ಬನ್ನಿ, ಲೊಕೇಶನ್ ಸೆಂಡ್ ಮಾಡಿದ್ದೀನಿ. ಸಾಯಂಕಾಲ 6ಗಂಟೆಗೆ ಸರಿಯಾಗಿ ಬನ್ನಿ, ನಾನು ಅಮ್ಮನ ಹತ್ತಿರ ನಿಮ್ಮ ವಿಷಯ ಮಾತಾಡಿಲ್ಲ, ಆದರೆ ಬೇರೆ ತರ ಮಾತಾಡಿ ಅವಳ ಅಭಿಪ್ರಾಯ ತಿಳ್ಕೊಂಡಿದ್ದೇನೆ "...

ಮರುದಿನ ಅಮ್ಮನಿಗೆ ಗಾರ್ಮೆಂಟ್ಸ್ ಯಿಂದ ಹಾಫ್ ಡೇ ಲೀವ್ ಹಾಕಿಸಿ ತಾನು ಕಾಲೇಜಿಂದ ಬೇಗ ಬಂದು ಮನೆಯೆಲ್ಲಾ ಒಪ್ಪ ಓರಣ ಮಾಡಿ ಉಪ್ಪಿಟ್ಟು ಕೇಸರಿಬಾತ್ ಮಾಡಿ ಅಮ್ಮನಿಗೆ ತನ್ನ ಫ್ರೆಂಡ್ ಬರ್ತಿದ್ದಾರೆ ಅಂತ ಸುಳ್ಳು ಹೇಳಿ, ತಾನು ಒಂದು ಸಿಂಪಲ್ ಚೂಡಿದಾರ್ ಹಾಕ್ಕೊಂಡು ಅಮ್ಮನಿಗೆ ಒಂದು ಚೆಂದದ ಸೀರೆ ಉಟ್ಕೋಳೋಕೆ ಹೇಳಿ ಕಾಯ್ತಾ ಕೂತಳು, ಸರಿಯಾಗಿ ಆರು ಗಂಟೆಗೆ ಕಾರ್ ಹಾರ್ನ್ ಕೇಳಿದ ಕೂಡಲೇ ಹೊರಗೆ ಓಡಿ ಹೋದ ಅವನಿ ಅಶೋಕ್ ಕೈ ಹಿಡಿದು ಮನೆ ಒಳಗೆ ಬಂದಳು, ಅಡುಗೆ ಮನೆಯಿಂದ ನೀರಿನ ಗ್ಲಾಸ್ ಹಿಡಿದು ಬಂದ ಅರುಂಧತಿ ಗೆ ಅಶೋಕ್ ನ ಗುರುತು ಸಿಗಲಿಲ್ಲ, ನಮಸ್ಕಾರ ಕೂತ್ಕೋಳಿ ಅಂತ ಹೇಳಿ ಮತ್ಯಾರು ಬಂದಿದ್ದಾರೆ ಅಂತ ಬಾಗಿಲು ಕಡೆಗೆ ನೋಡಿದಾಗ,"ಅಮ್ಮ, ಇವರೆ ನನ್ನ ಫ್ರೆಂಡ್, ಬೇರೆ ಯಾರು ಬಂದಿಲ್ಲಾ, ನೀನು ಕುತ್ಕೋ ಅಮ್ಮ, ನಾನು ಟಿಫನ್ ತರ್ತೀನಿ ಅಂತ ಒಳಗೆ ಹೋದಳು, ಮುಜುಗರ ದಿಂದ ಕೂತ ಅರುಂಧತಿ ಮುಖ ಮೇಲೆತ್ತಿ ಅವರನ್ನು ನೋಡಲೇ ಇಲ್ಲ,... ಆಗ ಅಶೋಕ್ ಅರುಂಧತಿಯನ್ನು ಒಮ್ಮೆ ನೋಡಿ ಈಗಲೂ ಅದೇ ಮುಗ್ಧ ಮುಖ, ಸ್ವಲ್ಪ ದಪ್ಪ ಆಗಿರೋದು ಬಿಟ್ಟರೇ ಇನ್ನೂ ಅಷ್ಟೇ ಸೌಂದರ್ಯ ಅಡಗಿದೆ, ವಯೋ ಸಹಜ ಪ್ರೌಢತೆ ಎದ್ದು ಕಾಣುತ್ತಿದೆ ಅಂತ ಮನಸಲ್ಲೇ ಅಂದುಕೊಂಡು ತಾನೇ ಮೌನ ಮುರಿದು "ಆರು... ನಾನು ಯಾರು ಅಂತ ಗುರುತು ಸಿಗಲಿಲ್ವ ಅಂತ ಕೇಳಿದಾಗ ಮುಖ ಮೇಲೆತ್ತಿ ನೋಡಿ, ಇಲ್ಲ ಅಂತ



ತಲೆ ಅಲ್ಲಾಡಿಸಿ ಸುಮ್ಮನೆ ಕೂತಳು,... ಆಗ ಅಶೋಕ್, ಆರು ನಾನು ಕಣೆ,

ಅಶೋಕ್ ನಿನ್ನ ಕ್ಲಾಸ್ಮೇಟ್ ಅಂದಾಗ, ಅರು ಬಾಯಿ ಮೇಲೆ ಕೈಯಿಟ್ಟು.. "ಅಯ್ಯೋ, ನೀವಾ "ಸಾರೀ, ನನಗೆ ಗುರುತು ಸಿಗಲಿಲ್ಲ, ತುಂಬಾ ವರ್ಷ ಆಯ್ತಲ್ಲ ನೋಡಿ, ಹಾಗಾಗಿ ಗೊತ್ತಾಗ್ಲಿಲ್ಲ,.... ಅಂದ ಹಾಗೇ ನೀವು ಹೇಗೆ ನಮ್ಮ ಅವನಿಗೆ ಪರಿಚಯ ಅಂದಾಗ ಅವನಿ ಉಪ್ಪಿಟ್ಟು ಕೇಸರಿ ಬಾತ್ ಪ್ಲೇಟ್ ನೊಂದಿಗೆ ಬಂದು "ಅಮ್ಮ, ಅದೆಲ್ಲಾ ಆಮೇಲೆ ಹೇಳ್ತೀನಿ, ಇವರು ನನ್ನ ಕ್ಲೋಸ್ ಫ್ರೆಂಡ್, ಈಗ ಒಂದು ಇಂಪಾರ್ಟೆಂಟ್ ವಿಷಯ ಹೇಳೋದಿದೆ, ನಾನು ನಿನ್ನೆ ಹೇಳಿದ ಫ್ರೆಂಡ್ ಅಮ್ಮ ನೀವೇ, ಮತ್ತೆ ಮದುವೆ ಆಗುವ ಗಂಡು ಇವರೇ "ಅಂದಾಗ ಅರು ಎದ್ದು ಒಳಗೆ ಹೋದಳು. ಅವಳನ್ನ ಹಿಂಬಾಲಿಸಿ ಹೋದ ಅವನಿ "ಅಮ್ಮ, ಅವರು ನಿನ್ನ ಶಾಲಾ ದಿನದಿಂದಲೇ ಪ್ರೀತಿ ಮಾಡ್ತಿದ್ರು, ಆದರೆ ವಿಷಯ ನಿನಗೆ ಹೇಳುವಷ್ಟರಲ್ಲಿ ನಿನಗೆ ಮದುವೆ ಆಗಿಬಿಟ್ಟಿತ್ತು, ಆದರೆ ಅವರು ಇನ್ನೂವರೆಗೂ ಬ್ರಹ್ಮಚಾರಿ, ದೇವರು ನಿಮ್ಮಿಬರನ್ನು ಈಗ ಒಂದು ಮಾಡೋಕೆ ಹೊರಟಿದ್ದಾನೆ, ನೀನ್ಯಾಕಮ್ಮ ಬೇಡ ಅಂತೀಯಾ, ನಾನು ಎಲ್ಲ ರೀತಿಯಲ್ಲಿ ಅವರನ್ನು ಪರೀಕ್ಷೆ ಮಾಡಿದ್ದೇನೆ, ಅವರು ನಿಜ್ವಾಗ್ಲೂ ಜೆಂಟಲ್ ಮ್ಯಾನ್, ಸಾಕಷ್ಟು ಆಸ್ತಿ ಅಂತಸ್ತು ಇದ್ದರೂ ತಮ್ಮ ಪರಿಧಿ ದಾಟಿ ಯಾವ ಕೆಟ್ಟ ಕೆಲಸ ಮಾಡಿಲ್ಲ, ಬದಲಿಗೆ ಸಾಕಷ್ಟು ಸಮಾಜ ಮುಖಿ ಕೆಲಸ ಮಾಡಿದ್ದಾರೆ, ಮಾಡುತ್ತಿದ್ದಾರೆ, ಇಂತವರು ನಿನ್ನ ಜೀವನ ದಲ್ಲಿ ಬರ್ತಿದ್ದಾರೆ ಅಂತ ನೀನು ಹೆಮ್ಮೆ ಪಡ್ಬೇಕು ಅಮ್ಮ, ನಿನ್ನ ಕಷ್ಟ ನೋವು ದೇವರಿಗೆ ಈಗ ಅರ್ಥ ಆಗಿಯೇ ಇವರನ್ನು ನಿನ್ನತ್ರ ಕಳಿಸಿದ್ದಾರೆ, ಪ್ಲೀಸ್ ಒಪ್ಕೋ ಅಮ್ಮ, ನಿನಗೆ ನನ್ನ ಬಿಟ್ಟರೇ ಯಾರಿದ್ದಾರೆ, ನನಗೂ ನಿನ್ನ ಬಿಟ್ಟರೇ ಯಾರು ಇಲ್ಲ, ನಿನ್ನ ಒಂಟಿಯಾಗಿ ಬಿಟ್ಟು ನಾನು ಮದುವೆ ಆಗಲ್ಲ ಅಂತ ಹೇಳಿ ವಯಸ್ಸು 28 ಆದರೂ ಇನ್ನೂ ಹೀಗೆಯೇ ಇದ್ದೀನಿ , ನಿನ್ನ ಬಿಟ್ಟು ನಾನು ಹೇಗೆ ಗಂಡನ ಮನೆಯಲ್ಲಿ ನೆಮ್ಮದಿಯಾಗಿ ಇರೋಕೆ ಆಗುತ್ತೇ ಅಮ್ಮ, ನೀನು ಲೈಫ್ ನಲ್ಲಿ ಸೆಟಲ್ ಆದರೆ ಮುಂದೆ ನಾನು ನನ್ನ ದಾರಿ ನೋಡ್ಕೋತೀನಿ "ಅಂದಾಗ ಅರು ಮಗಳನ್ನ ಹಿಡ್ಕೊಂಡು ಅಳತೊಡಗಿದಳು,.. ಅವನಿ ನನ್ನ ಕಂದ, ಎಷ್ಟು ಬೆಳೆದು ಬಿಟ್ಟಿದಿಯೇ ನೀನು.... ನಾನು ನೀನಿನ್ನು ಸಣ್ಣ ಕೂಸು ಅಂದ್ಕೊಂಡೆ ಇದ್ದೀನಿ, ನನ್ನ ಬುದ್ಧಿ ಗಿಷ್ಟು...... ಇವತ್ತು ನಿನ್ನ ಮನಸು ಅರ್ಥ ಆಯ್ತು, ನೀನ್ಯಾಕೆ ಮದುವೆ ಗೆ ಒಪ್ತಿರಲಿಲ್ಲ ಅಂತ..... ಆಯ್ತು ಕಣೆ, ನೀನು ಚೆನ್ನಾಗಿ ಇರ್ತೀಯ ಅಂದ್ರೇ ನೀ ಏನು ಹೇಳಿದ್ರು ಕೇಳ್ತೀನಿ, ಅಶೋಕ್ ಬಗ್ಗೆ ನನಗೆ ಮೊದಲಿಂದಾನು ಗೊತ್ತು ಕಣೆ, ಅವರು ಆಗಲೂ ನನ್ನ ಪ್ರೀತಿಸ್ತೀದ್ರು ಅಂತ, ನನಗೂ ಸ್ವಲ್ಪ ಅವರ ಕಡೆಗೆ ಮನಸ್ಸಿತ್ತು,ಆದರೆ ನಾನು ಪುಕ್ಕಲಿ,ಅವರ ಬಳಿ ಹೇಳಿರಲಿಲ್ಲ,ಅವರು ಸಹ ಹೇಳುವ ಧೈರ್ಯ ಮಾಡಲಿಲ್ಲ, ಹೇಳಿದ್ದರೂ ಅದು ಆಗುವ ಮಾತಲ್ಲ ಬಿಡು.... ಕೂಸೇ, ನೀನು ಮದ್ವೆ ಆಗ್ತೀನಿ ಅಂತ ನಂಗೆ ಪ್ರಾಮಿಸ್ ಮಾಡು, ಆಗ ನಾನು ನೀನು ಹೇಳಿದ ಹಾಗೇ ಮಾಡ್ತೀನಿ ಅಂದಾಗ, "ಅಯ್ಯೋ, ಅರು.....

ನಾನೇನು ಸನ್ಯಾಸಿ ಆಗಲ್ಲ ಕಣೆ ತಾಯಿ, ಮುಂದಿನ ವಾರನೇ ಹುಡುಗನ ಕರ್ಕೊಂಡು ಬಂದು ನಿನ್ನ ಮುಂದೆ ನಿಲ್ಲಿಸ್ತೀನಿ ಅಂದಾಗ ನಗುತ್ತಾ ಅರುಂಧತಿ ಮಗಳ ತಲೆಗೆ ಮೊಟಕಿದಳು..

ಹೊರಗೆ ಹಾಲ್ ನಲ್ಲಿ ಕುಳಿತ ಅಶೋಕ್ ಆತಂಕ ದಿಂದ ಇವರನ್ನೇ ನೋಡುವಾಗ ಅವನಿ "ಸರ್... ಗ್ರೀನ್ ಸಿಗ್ನಲ್ ಸಿಗ್ತು ಅಂತ ಹೇಳಿದಾಗ,

ಅಶೋಕ್...."ಅವನಿ ಸರ್ ಅನ್ನಬೇಡಮ್ಮ ,.... ಅಪ್ಪಾಜೀ ಅನ್ನು ಅಂದಾಗ ಅವನಿ, ಹಾಗೂ ಅರುಂಧತಿ ಕಣ್ಣಲ್ಲಿ ನೀರು ಜಿನುಗಿತು...!

ಅಪ್ಪಾಜೀ, ಇವತ್ತು ನೀವು ಅಮ್ಮನಿಗೆ ಪ್ರಪೋಸ್ ಮಾಡಿ, ಇಷ್ಟು ದಿನದ ನಿಮ್ಮ ಪ್ರೀತಿಯನ್ನೆಲ್ಲ ಈಗ ಹೇಳಿ ಬಿಡಿ ಅಂದಾಗ... ಮಂಡಿಯೂರಿ ಕುಳಿತ ಅಶೋಕ್, ಬರಡಾದ ಬಾಳಲ್ಲಿ ನೀ ಈಗ ಬರಬೇಕು, ಒಲವಿನ ಮಳೆಯಲಿ ನಾ ತೇಲಬೇಕು, ಬಾಡಿ ಹೋದ ಹಣ್ಣೆಲೆ ಯಂತಿದ್ದ ನನ್ನ ಬದುಕು ನಿನ್ನ ಪ್ರೀತಿಯ ಸಿಂಚನದಿಂದ ಮತ್ತೆ ಚಿಗುರೊಡೆಯಬೇಕು ನನ್ನ ಹೃದಯದ ಅರಮನೆಗೆ ನೀ ರಾಣಿಯಾಗಬೇಕು, ಇದಕ್ಕೆ ನಿನ್ನ ಅನುಮತಿ ಕೊಡುತಿಯ ಅರು ಅಂದಾಗ.... ಅರುಂಧತಿ ನಾಚಿ ತಲೆ ಕೆಳಗೆ ಹಾಕಿದಳು.

ತಮ್ಮದೇ ಪ್ರೇಮ ಸಾಮ್ರಾಜ್ಯ ವನ್ನು ಸ್ಥಾಪಿಸಿದ ಈ ಜೋಡಿ, ಮಗಳಿಗೂ ಮದುವೆ ಮಾಡಿ ಅಳಿಯ ಮಗಳೊಂದಿಗೆ ಅಮೇರಿಕಾಗೆ ಹೋಗಿ ತುಂಬು ಸಂಸಾರದಲ್ಲಿ ಮಕ್ಕಳು ಮೊಮ್ಮಕ್ಕಳೊಂದಿಗೆ ಬಾಳಿನ ಸಂಜೆಯನ್ನು ಸುಖ, ಸಂತೋಷದಿಂದ ಕಳೆದರು...!


# ಒಲವೇ....


ಉದಯರಶ್ಮಿ ದಿನಪತ್ರಿಕೆ

## ಕಾವ್ಯರಶ್ಮಿ

– ರಮ್ಯಾ ಅಡಿಗ.


("ನಮ್ಮ ಕಥಾ ಅರಮನೆ" ಬರಹಗಾರರು)

ಪಾತರಗಿತ್ತಿಯಂತೆ ಹಾರುವ ಹುಚ್ಚು ಮನವ
ಹೇಗೆ ಸೆಳೆದು ಬಂಧಿಸಿದೆ ಹೇಳೆನ್ನ ಚೆಲುವ.
ನೀ ಕೊಂಚ ಕೊಡಲಾರೆಯಾ ನಿನ್ನೊಲವ.
ಸೋತಿರುವೆ,ಒಪ್ಪಿಸಿಕೋ ಈ ಹೃದಯವ.

ಪ್ರೇಮ ಕದನದಿ ನಿನ್ನೆದುರು ಸೋತು ಗೆದ್ದಿರುವೆ.
ಅನುರಾಗದ ಕಪ್ಪವನು ನಿನಗೊಪ್ಪಿಸಿರುವೆ
ಹೃದಯ ಸಾಮ್ರಾಜ್ಯವಾಳಲೆಂದು ಬರುವೆ?.
ಅಂತರಂಗದ ಕದ ತೆಗೆದು ನಾ ಕಾದಿರುವೆ.

ನಿನ್ನೊಲವಲಿ ಮೀಯಲು ಎದೆನೆಲ ಸಜ್ಜಾಗಿದೆ.
ರಂಗಿನ ಕನಸ ಚಿಟ್ಟೆ ಹಾರಲು ರೆಕ್ಕೆಬಿಚ್ಚಿದೆ.
ನಿನ್ನದೇ ನೆನಪಲಿ ಈ ಕೆನ್ನೆಯು ರಂಗೇರಿದೆ
ಹಾದಿಯ ಕಾಯುತ ಈ ಜೀವ ಹಂಬಲಿಸಿದೆ.



### ಸಿಂದಗಿ ತಾಲೂಕು 6ನೇಯ ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿದ ಶಾಸಕ ಅಶೋಕ ಮನಗೂಳಿ ಅಭಿಮತ

# ಕನ್ನಡದ ಗತ ವೈಭವ ಯುವ ಪೀಳಿಗೆಗೆ ವರ್ಗಾಯಿಸೋಣ

**ಉದಯರಶ್ಮಿ ನ್ಯೂಸ್**

ದಿ.ಎಂ.ಸಿ.ಮನಗೂಳಿ ಮಹಾ ವೇದಿಕೆ ಸಿಂದಗಿ: ಸಮ್ಮೇಳನಗಳು ಇಂದಿನ ಯುವ ಸಾಹಿತಿಗಳಿಗೆ ಪ್ರೇರಣಾದಾಯಕ. ಕನ್ನಡದ ಗತ ವೈಭವವನ್ನು ಯುವ ಪೀಳಿಗೆಗೆ ವರ್ಗಾಯಿಸುವ ಕಾರ್ಯ ನಮ್ಮ ನಿಮ್ಮೆಲ್ಲರದ್ದು ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು.

ಪಟ್ಟಣದ ಎಚ್.ಜಿ.ಪ್ರೌಢಶಾಲಾ ಆವರಣದಲ್ಲಿ ದಿ.ಎಂ.ಸಿ.ಮನಗೂಳಿ ಅವರ ಮಹಾ ವೇದಿಕೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸಿಂದಗಿ ವತಿಯಿಂದ ಹಮ್ಮಿಕೊಂಡ ತಾಲೂಕಾ 6ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇಂದಿನ ಯುವಕರಿಗೆ ಹಿರಿಯ ಸಾಹಿತಿಗಳ ಮಾರ್ಗದರ್ಶನ ಅವರ ಚಿಂತನೆಗಳು ಮನೆ ಮಾತಾಗಬೇಕು. ಸಿಂದಗಿ ತಾಲೂಕಿಗೆ ಐತಿಹಾಸಿಕ ಹಿನ್ನಲೆ ಇದೆ. ಸಿಂದಗಿ ಸಾಹಿತಿಗಳ ತವರೂರು. ಸಂಗೀತ ದಿಗ್ಗಜ ರವೀಂದ್ರ ಹಂದಿಗನೂರ, ನಟ ಸಾರ್ವಭೌಮ ಹಂದಿಗನೂರ ಸಿದ್ರಾಮಪ್ಪ, ಪತ್ರಕರ್ತ ರೇ.ಚ.ರೇವಡಿಗಾರ, ಡಾ.ಚನ್ನಪ್ಪ ಕಟ್ಟಿ, ಡಾ.ಎಂ.ಎಂ ಪಡಶೆಟ್ಟಿ, ಹ.ಮ.ಪೂಜಾರ ಸುಶೀಲಾ ಕಮತಗಿಯಂತಹ ದಿಗ್ಗಜ ಮಾತೃಭೂಮಿ ಸಿಂದಗಿ.

ಸಿಂದಗಿ ತಾಲೂಕು ಶೈಕ್ಷಣಿಕವಾಗಿ, ಭೌಗೋಳಿಕವಾಗಿ ಸಾಕಷ್ಟು ಮುಂದುವರಿದಿದೆ. ಕಾರಣ ವಿಜಯಪುರ ಜಿಲ್ಲೆ ವಿಭಜನೆಯಾದರೆ ಸಿಂದಗಿಯನ್ನು ಜಿಲ್ಲೆಯಾಗಿಸುವಲ್ಲಿ ಪ್ರಥಮ ಆದ್ಯತೆ. ಸಿಂದಗಿ ಹೊಯ್ಸಳರು, ಚಾಲುಕ್ಯರ ಕಾಲದ ಪ್ರಾಚೀನ ಮಂದಿರಗಳನ್ನು ಪುನಶ್ಚೇತನಗೊಳಿಸಿ ಗತ ವೈಭವ ಮತ್ತೇ ಸಾರುವ ಕಾರ್ಯ ಮತ್ತು ಚಿಮ್ಮಲಗಿ ಏತ ನೀರಾವರಿಗೆ ಹೆಚ್ಚಿನ ಒತ್ತು ನೀಡುವೆ ಎಂದರು.

ಇದೇ ಸಂದರ್ಭದಲ್ಲಿ ಗುರುದೇವಾಶ್ರಮದ ಶಾಂತಗಂಗಾಧರ ಸ್ವಾಮಿಜಿಯವರು ಬರೆದ ನಿಜ ಶರಣ ಅಂಬಿಗೇರ ಚೌಡಯ್ಯ ಕೃತಿಯನ್ನು ಬಿಡುಗಡೆ ಬಿಡುಗಡೆಗೊಳಿಸಲಾಯಿತು.



ಕಸಾಪ ಜಿಲ್ಲಾ ಗೌರವ ಕೋಶಾಧ್ಯಕ್ಷ ಡಾ.ಸಂಗಮೇಶ ಮೇತ್ರಿ ಕೃತಿ ಪರಿಚಯಿಸಿ ಮಾತನಾಡಿದ ಅವರು, ಬರಹಗಾರರು ಗುಣಮಟ್ಟದ ಸಾಹಿತ್ಯ ರಚಿಸಬೇಕು. ಇಂದು ಪುಸ್ತಕ ಒದುವ ಹವ್ಯಾಸ ಕಡಿಮೆಯಾಗುತ್ತಿರುವುದು ಅತ್ಯಂತ ನೋವಿನ ಸಂಗತಿ ಎಂದು ವಿಷಾದಿಸಿದರು.

ಬಳಿಕ ಸಿಂದಗಿ ತಾಲೂಕಿನ ಆರನೆಯ ಕನ್ನಡ ಸಾಹಿತ್ಯ ಸಮ್ಮೇಳನ ಸರ್ವಾಧ್ಯಕ್ಷ ರಾ.ಶಿ.ವಾಡೆದ ಮಾತನಾಡಿ, ನೈತಿಕತೆ, ಶಿಕ್ಷಣ, ಸಾಹಿತ್ಯದಿಂದ ಸಂತೃಪ್ತಿ ಜೀವನಕ್ಕೆ ಬೇಕಾಗಿರುವ ಶಿಕ್ಷಣ ನೀಡಬೇಕು. ಮಕ್ಕಳಿಗೆ ಕನ್ನಡ ಕಡ್ಡಾಯಗೊಳಿಸಬೇಕು. ಲೇಖಕರಿಗೆ ಸರಕಾರದಿಂದ ಆರ್ಥಿಕ ಸಹಾಯ ದೊರೆಯುವಂತಾಗಬೇಕು. ವಿಜಯಪುರ ಜಿಲ್ಲೆ ವಿಭಜನೆಯಾದರೆ ಸಿಂದಗಿಯನ್ನು ಜಿಲ್ಲೆಯನ್ನಾಗಿ ಮಾಡಬೇಕು. ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಈ ವೇಳೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಸಾಪ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲೀಕಾರ ಮಾತನಾಡಿ, ಕನ್ನಡ ಸಾಹಿತ್ಯ ಮನಮನೆಗೆ ತಲುಪಿಸುವ ಕಾರ್ಯ ಮಾಡುತ್ತಿರುವದು ಹೆಮ್ಮೆಯ ವಿಷಯ. ಕನ್ನಡ ನಮ್ಮ ನೆಲ ಮತ್ತು ಅನ್ನದ ಭಾಷೆಯಾಗಿದೆ. ಕನ್ನಡ ಕಡ್ಡಾಯ ಶಿಕ್ಷಣ ನೀಡಬೇಕು ಎಂದರು.

ಈ ವೇಳೆ ಆಲಮೇಲ ವಿರಕ್ತಮಠದ ಜಗದೇವ ಮಲ್ಲಿಬೊಮ್ಮಯ್ಯ ಸ್ವಾಮಿಗಳು, ಗುರುದೇವಾಶ್ರಮ ಶಾಂತಗಂಗಾಧರ ಶ್ರಿಗಳು ಸಾನಿಧ್ಯ ವಹಿಸಿದ್ದರು. ತಾಲೂಕು ದಂಡಾಧಿಕಾರಿ ಪ್ರದೀಪಕುಮಾರ ಹಿರೇಮಠ, ಕಸಾಪ ತಾಲೂಕಾಧ್ಯಕ್ಷ ಶಿವಾನಂದ ಬಡಾನೂರ, ಅಶೋಕ ತೆಲ್ಲೂರ, ಆನಂದ ಭೂಸನೂರ, ಆರ್.ಎಚ್.ಬಿರಾದಾರ, ಝಾಕೀರ ಹುಸೇನ ಮನಿಯಾರ, ಕಸಾಪ ನಿಕಟಪೂರ್ವ ತಾಲೂಕಾಧ್ಯಕ್ಷ ರಾಜಶೇಖರ ಕೂಚಬಾಳ, ಸಂತೋಷ ಪಾಟೀಲ, ಶಿವಶರಣ ಗುಂದಗಿ, ಅನ್ನಪೂರ್ಣ ಬೆಳ್ಳನವರ, ಅಭಿಷೇಕ ಚಕ್ರವರ್ತಿ, ರಾಜು ಶಿವನಗುತ್ತಿ, ಮಹಾಂತೇಶ ಪಟ್ಟಣಶೆಟ್ಟಿ, ಅಶೋಕ ಗಾಯಕವಾಡ, ಸಂತೋಷ ಮಣಿಗಿರಿ, ಮಹಾಂತೇಶ ಪಟ್ಟಣಶೆಟ್ಟಿ ವೇದಿಕೆಯ ಮೇಲಿದ್ದರು.

ಅಶೋಕ ಬಿರಾದಾರ ಸ್ವಾಗತಿಸಿದರು. ರವಿ ಗೋಲಾ ನಿರೂಪಿಸಿದರು. ಎಸ್.ಎಮ್.ಬಿರಾದಾರ ವಂದಿಸಿದರು. ಶಾಂತೂ ರಾಣಾಗೋಳ. ಭೀಮಣ್ಣ ಹೇರೂರ ಕಾರ್ಯಕ್ರಮ ನಿರ್ವಹಿಸಿದರು.

ಇದೇ ಸಂದರ್ಭದಲ್ಲಿ ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಿಂದ, ಟಿಪ್ಪು ಸುಲ್ತಾನ್ ವೃತ್ತ, ತೋಂಟದ ಸಿದ್ದಲಿಂಗ ಶ್ರೀಗಳ ರಸ್ತೆ, ಸ್ವಾಮೀ ವಿವೇಕಾನಂದ ವೃತ್ತದ ಮಾರ್ಗವಾಗಿ ನಾಡದೇವಿ ಭಾವಚಿತ್ರದೊಂದಿಗೆ ಸಮ್ಮೇಳನಾಧ್ಯಕ್ಷರ ಭವ್ಯ ಮೆರವಣಿಗೆ ಎಚ್.ಜಿ.ಪ್ರೌಢಶಾಲಾ ಆವರಣಕ್ಕೆ ಕರೆ ತರಲಾಯಿತು.

ಗೋಷ್ಠಿ 01: ಜನಪದ ಸಾಹಿತ್ಯ ಕುರಿತು ಪ್ರಥಮ ಗೋಷ್ಠಿಯ ಸಾನಿಧ್ಯವನ್ನು ಯಂಕಂಚಿ ಶ್ರೀಮಠದ ಅಭಿನವ ರುದ್ರಮುನಿ ಶಿವಾಚಾರ್ಯರು, ಮಕ್ಕಳ ಸಾಹಿತಿ ಹ.ಮ.ಪೂಜಾರ ಅವರು ಅಧ್ಯಕ್ಷತೆ ವಹಿಸಿದ್ದರು. ಕಸಾಪ ಜಿಲ್ಲಾ ಕೋಶಾಧ್ಯಕ್ಷ ಡಾ.ಸಂಗಮೇಶ ಮೇತ್ರಿ ಅವರು ಸಿದ್ದಲಿಂಗ ಕಿಣಗಿ ಹಾಗೂ ಪಂಡಿತ ಯಂಪೂರೆ ಅವರ ಸಂಪಾದಕತ್ವದ ಸಿಂದಗಿ ಸಂಪದ ಸ್ಮರಣ ಸಂಚಿಕೆಯನ್ನು ಅನಾವರಣಗೊಳಿಸಿದರು.

ಈ ವೇಳೆ ಜನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳ ಕುರಿತು ಶಿವಲೀಲಾ ಮುರಾಳ, ಜನಪದ ಸಾಹಿತ್ಯದಲ್ಲಿ ಗರತಿ ವಿಷಯದ ಕುರಿತು ಶಿಲ್ಪಾ ಪತ್ತಾರ ಉಪನ್ಯಾಸ ನೀಡಿದರು.

ಗೋಷ್ಠಿ 02: ಮಹಿಳಾ ಪರ ಚಿಂತನೆ ದ್ವಿತೀಯ ಗೋಷ್ಠಿಯ ಸಮ್ಮುಖವನ್ನು ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕಿ ರಾಜಯೋಗಿಸಿ ಪವಿತ್ರಾ ಜಿ ವಹಿಸಿದ್ದರು. ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶ ನಾಗೇಶ ಮೋಗೆರ ಗೋಷ್ಠಿಯನ್ನು ಉದ್ಘಾಟಿಸಿದರು. ಸಾಹಿತಿ ಶಂಕುಂತಲಾ ಹಾದಿಮನಿ ಡಾ.ಬಿ.ಆರ್. ಅಂಬೇಡ್ಕರ್, ಜ್ಯೋತಿ ನಂದಿಮಠ ವಿಶ್ವಗುರು ಸಾಂಸ್ಕೃತಿಕ ನಾಯಕ ಬಸವಣ್ಣನವರ, ಮಹಿಳಾಪರ ಚಿಂತನೆ ಕುರಿತು ಉಪನ್ಯಾಸ ನೀಡಿದರು. ಅನ್ನಪೂರ್ಣ ಬೆಳ್ಳನವರ ಬೌದ್ಧ ಧರ್ಮದಲ್ಲಿ ಮಹಿಳಾ ಹಕ್ಕುಗಳ ಕುರಿತು ಉಪನ್ಯಾಸ ನೀಡಿದರು.

ಈ ವೇಳೆ ನಾಗರತ್ನ ಮನಗೂಳಿ, ಸುನಂದಾ ಯಂಪುರೆ, ಶೈಲಜಾ ಸ್ಥಾವರಮಠ, ಮಹಾನಂದ ಬಮ್ಮಣ್ಣಿ ಇದ್ದರು.

ಗೋಷ್ಠಿ 03: ತೃತೀಯ ಗೋಷ್ಠಿಯ ಸಾನಿಧ್ಯವನ್ನು ವಿಶ್ವರಾಧ್ಯ ಶ್ರೀಮಠದ ಮಹಾಲಿಂಗೇಶ್ವರ ಮಹಾಸ್ವಾಮಿಗಳು ವಹಿಸಿದ್ದರು. ಕಾರ್ಯಕ್ರಮವನ್ನು ಅಶೋಕ ಅಲ್ಲಾಪೂರ ಉದ್ಘಾಟಿಸಿದರು.

ಶ್ರೀಶೈಲಗೌಡ ಬಿರಾದಾರ ಮಾಗಣಗೇರಿ, ಡಾ.ಬಿ.ಜಿ.ಪಾಟೀಲ, ಡಿ.ಎಂ.ಪಾಟೀಲ, ಚಂದ್ರಶೇಖರ ದೇವರೆಡ್ಡಿ, ಆರೀಫ್ ಬಿರಾದಾರ, ಟಿ.ಕೆ.ಮಲಗೊಂಡ, ಶ್ರೀಶೈಲ ಕೋರಳ್ಳಿ, ನಿಂಗರಾಜ ಗುಡಿಮನಿ, ಪಂಡಿತ ಯಂಪುರೆ, ಡಾ.ಮಹಾಂತೇಶ ಹಿರೇಮಠ ಇದ್ದರು.

ಈ ವೇಳೆ ಸಿದ್ದರಾಮ ಬ್ಯಾಕೋಡ ಒಳಗೊಂಡಂತೆ ಕವಿಗಳು ಕವನ ವಾಚನ ಮಾಡಿದರು.

ಕಾರ್ಯಕ್ರಮದಲ್ಲಿ ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕಾಧ್ಯಕ್ಷ ಆನಂದ ಶಾಬಾದಿ, ಚಂದ್ರಶೇಖರ ನಾಗರಬೆಟ್ಟ, ಸಂಗನಗೌಡ ಪಾಟೀಲ, ಮಲ್ಲನಗೌಡ ಪಾಟೀಲ, ಬಸವರಾಜ ಅಗಸರ, ಡಾ.ಪ್ರಕಾಶ ಮೂಡಲಗಿ, ಮಹಾಂತೇಶ ನಾಗೋಜಿ, ಪ್ರತಿಭಾ ಚಳ್ಳಗಿ, ವರ್ಷಾ ಪಾಟೀಲ, ಭೀಮಣ್ಣ ಹೆರೂರ, ಸಾಯಬಣ್ಣ ಪುರದಾಳ, ವಾಯ್.ಸಿ.ಮಯೂರ, ಸಾಯಬಣ್ಣ ದೇವರಮನಿ, ಅಶೋಕ ಗಾಯಕವಾಡ, ಅಂಬೀಕಾ ಪಾಟೀಲ, ಶೋಭಾ ಚಿಗರಿ, ಸೈನಾಬಿ ಮಸಳಿ ಸೇರಿದಂತೆ ಸಾಹಿತ್ಯಾಸಕ್ತರು, ಸಾಹಿತ್ಯಾಭಿಮಾನಿಗಳು ಇದ್ದರು.

# ಭೂತನಾಳ ಕೆರೆಗೆ ಮತ್ತಷ್ಟು ನೀರು :ಸಚಿವ ಪಾಟೀಲ

**ಉದಯರಶ್ಮಿ ನ್ಯೂಸ್**



ವಿಜಯಪುರ: ನಗರಕ್ಕೆ ನೀರು ಪೂರೈಸುವ ಭೂತನಾಳ ಕೆರೆಗೆ ಮತ್ತಷ್ಟು ನೀರು ಹರಿಸಲಾಗುತ್ತಿದ್ದು, ಅರಕೇರಿ ಏತ ನೀರಾವರಿ ಮೂಲಕವೂ ಇಂದಿನಿಂದ ನೀರು ಬಿಡಲಾಗುತ್ತಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ತಿಳಿಸಿದ್ದಾರೆ.

ಈ ಕುರಿತು ಮಾಧ್ಯಮ ಪ್ರಕಟಣೆ ನೀಡಿರುವ ಅವರು, ವಿಜಯಪುರದ ಜೀವನಾಡಿ ಭೂತನಾಳ ಕೆರೆಯು ಬರಗಾಲದಿಂದ ಬತ್ತಿ ಹೋಗುತ್ತಿದ್ದು, ನಗರದಲ್ಲಿ ಕುಡಿಯುವ ನೀರಿನ ತೊಂದರೆ ಎದುರಾಗಿತ್ತು. ಈ ಸಮಸ್ಯೆ ನಿವಾರಿಸುವ ಸಲುವಾಗಿ ಮುಳವಾಡ ಏತ ನೀರಾವರಿ ಯೋಜನೆಯಡಿ ನಿರ್ಮಾಣವಾದ ತಿಡಗುಂದಿ ಆಕ್ವಾಡಕ್ಟ್ ಮೂಲಕ ಭೂತನಾಳ ಕೆರೆಗೆ ಕೃಷ್ಣಾನದಿ ನೀರು ತುಂಬಿಸುವಂತೆ ಅಧಿಕಾರಿಗಳಿಗೆ ಸಚಿವರು ಸೂಚಿಸಿದ್ದು, ಅಧಿಕಾರಿಗಳು ಅವರು ಈಗಾಗಲೇ ನೀರು ಹರಿಸುತ್ತಿದ್ದಾರೆ.

ಈಗ ಪೂರ್ಣ ಪ್ರಮಾಣದಲ್ಲಿ ಕುಡಿಯುವ ನೀರಿನ ಸಮಸ್ಯೆ ನೀಗಿಸುವ ದೃಷ್ಟಿಯಿಂದ ಅರಕೇರಿ ಏತ ನೀರಾವರಿ ಮೂಲಕ ನೀರು ಹರಿಸುವಂತೆ ಸೂಚಿಸಿದ್ದೇನೆ. ಅದರಂತೆ, ಕೆರೆಯ ಮತ್ತೊಂದು ಭಾಗಕ್ಕೆ ಇಂದಿನಿಂದ ನೀರು ಹರಿಸಲಾಗುತ್ತಿದೆ. ವಿದ್ಯುತ್ ಮೋಟಾರ್ ಗಳನ್ನು ಬಳಸದೆ ನೈಸರ್ಗಿಕವಾಗಿ ನೀರು ಹರಿದು ಬರುವಂತೆ ವ್ಯವಸ್ಥೆ ಮಾಡಲಾಗಿದ್ದು, ಭೂತನಾಳ ಕೆರೆಯಲ್ಲಿ ಸಾಕಷ್ಟು ನೀರಿನ ಸಂಗ್ರಹವಾಗಲಿದೆ. ಹೀಗಾಗಿ ಈ ಬಾರಿಯ ಬೇಸಿಗೆಗೆ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗದೆಂಬ ವಿಶ್ವಾಸ ನನಗಿದೆ.

ಈಗ ಭೂತನಾಳ ಕೆರೆಗೆ ನೀರು ತುಂಬಿಸಲಾಗುತ್ತಿರುವುದರಿಂದ ಮುಂದಿನ ಮೂರು ತಿಂಗಳು ಬೇಸಿಗೆಯಲ್ಲಿ ಕುಡಿಯಲು ನೀರಿನ ಸಮಸ್ಯೆ ಆಗುವುದಿಲ್ಲ ಎಂದು ಸಚಿವರು ಮಾಧ್ಯಮ ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.

# ತಾಯಿ ಕುಟುಂಬದ ಭಾವನಾತ್ಮಕ ಬೆನ್ನೆಲುಬು

**ಉದಯರಶ್ಮಿ ನ್ಯೂಸ್**

ವಿಜಯಪುರ: ಇಂದಿನ ಮಕ್ಕಳು ಅಕ್ಷರದೊಂದಿಗೆ ಉತ್ತಮ ಸಂಸ್ಕೃತಿ, ಸಂಸ್ಕಾರ, ನೈತಿಕ ಮೌಲ್ಯಗಳನ್ನು ಬೆಳೆಸಿ□□□ಂಡು ತಮ್ಮ ಭವಿಷ್ಯ ಕಟ್ಟಿಕೆಣಟಿಜಜ-ಜುಟಿಜಜಳ್ಳಬೇಕು ಎಂದು ಅಥರ್ಗಾ ಗುರುದೇವಾಶ್ರಮದ ಈಶಪ್ರಸಾದ ಮಹಾಸ್ವಾಮಿಗಳು ಹೇಳಿದರು.

ಅವರು ತಾಲೂಕಿನ ನಾಗಠಾಣ ಗ್ರಾಮದ ಶ್ರೀ ಮಲ್ಲಿಕಾರ್ಜುನ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜರುಗಿದ ಮಾತೃ ಸಂಗಮ, ತಾಯಂದಿರ ಪಾದಪೂಜೆ ಹಾಗೂ ಮಕ್ಕಳಿಗೆ ಕೈತುತ್ತು ಉಣಿಸುವ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದರು.

ತಾಯಿ ತನ್ನ ಸಂತೋಷವನ್ನು ತನ್ನ ಮಗುವಿಗೆ ತ್ಯಾಗ ಮಾಡುತ್ತಾಳೆ. ತಾಯಿ ಕಲಿಸಿದ ನೈತಿಕ ಮೌಲ್ಯಗಳು ಮಗುವಿನ ಭವಿಷ್ಯಕ್ಕೆ ಭದ್ರಬುನಾದಿ. ಆರೋಗ್ಯಯುತ ಸಮಾಜ ನಿರ್ಮಾಣದಲ್ಲಿ ತಾಯಿಯ ಪಾತ್ರ ಬಹುಮುಖ್ಯ ಎಂದು ಹೇಳಿದರು.

ನಾಗಠಾಣ ಕರ್ನಾಟಕ ಪಬ್ಲಿಕ್ ಪ್ರೌಢಶಾಲೆಯ ಉಪ ಪ್ರಾಚಾರ್ಯ ಪ್ರಮೋದ ಮೆಂಚ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ತಾಯಂದಿರು ಕುಟುಂಬದ ಭಾವನಾತ್ಮಕ ಬೆನ್ನೆಲುಬು.ಅವರು ದೇವರ ಅಮೂಲ್ಯ ಉಡುಗೊರೆ.'ಜನನಿ ತಾನೇ ಮಗುವಿನ ಮೊದಲ ಗುರು' ಎಂಬಂತೆ ಮಗುವಿನ ಸಮಗ್ರ ಬದುಕು ರೂಪಿಸುವಲ್ಲಿ ತಾಯಿಯ ಪಾತ್ರ ಅನನ್ಯ ಎಂದು ಹೇಳಿದರು.

ಉಪನ್ಯಾಸ ನೀಡಿದ ಶಿಕ್ಷಕ ಸಂತೋಷ ಬಂಡೆ, ಭೂಮಿಯ ಮೇಲೆ ನಿಸ್ವಾರ್ಥ ಮನಸ್ಸಿನ ಜೀವವೇ ತಾಯಿ. ತಾಯಿಯು ಮಕ್ಕಳ ವ್ಯಕ್ತಿತ್ವದ ಬೆಳವಣಿಗೆಯ ಜೊತೆಗೆ

ಎಲ್ಲರೊಂದಿಗೆ ಪ್ರೀತಿ, ಕರುಣೆಯನ್ನು ತೋರಿಸುವ ಗುಣವನ್ನು ಬೆಳೆಸುತ್ತಾಳೆ. ತಾಯಿಯು ಮೈತುಂಬಾ ಕಣ್ಣಾಗಿ ಇದ್ದು ಮಕ್ಕಳ ಭವಿಷ್ಯ ನಿರ್ಮಾಣ ಮಾಡಬೇಕು ಎಂದರು.

ಶಾಲಾ ಮುಖ್ಯ ಶಿಕ್ಷಕ ಸುರೇಶಗೌಡ ಬಿರಾದಾರ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಸ್ಥೆಯ ಅಧ್ಯಕ್ಷ ಶಂಕರ ಹುಣಶ್ಯಾಳ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥೆಯ ಕಾರ್ಯದರ್ಶಿ ಸುನಂದಾ ಹುಣಶ್ಯಾಳ, ಶಿಕ್ಷಕರಾದ ಎಂ ಎಸ್ ಪಾಪನಾಳಮಠ, ರಾಘು ಮೊಗಳ, ಭೀಮಾಶಂಕರ ಕೋರೆ, ಜಯಶ್ರೀ ಬಂಗಾರಿ, ಬಸಮ್ಮ ವಡಗೇರಿ, ಮಧುಮತಿ ನಿಕ್ಕಂ, ರೂಪಾ ಶಹಾಪುರ, ಸರೋಜಿನಿ ಕಟ್ಟಿಮನಿ, ರೇಣುಕಾ ಭಜಂತ್ರಿ, ಲಕ್ಷ್ಮೀ ಮೇತ್ರಿ, ವೀರೇಶ ಹುಣಶ್ಯಾಳ ಸೇರಿದಂತೆ ಮಕ್ಕಳು, ತಾಯಂದಿರು, ಪಾಲಕರು ಭಾಗವಹಿಸಿದ್ದರು.



ಇದೇ ಸಂದರ್ಭದಲ್ಲಿ ಮಕ್ಕಳು ತಮ್ಮ ತಾಯಂದಿರ ಪಾದಪೂಜೆ ಮಾಡಿದರು. ಜೊತೆಗೆ ತಾಯಂದಿರು

### ಹೆಸ್ಕಾಂ ವಿಭಾಗೀಯ ಕಚೇರಿ ಕಂಪೌಂಡ್ ಗೋಡೆ ನಿರ್ಮಾಣ । ಸಚಿವ ಶಿವಾನಂದ ಪಾಟೀಲ ಸೂಚನೆ

# ನಿಗದಿತ ಅವಧಿಯಲ್ಲಿ ಗುಣಮಟ್ಟದ ಕಾಮಗಾರಿ ಪೂರ್ಣಗೊಳಿಸಿ

**ಉದಯರಶ್ಮಿ ನ್ಯೂಸ್**



ಬಸವನಬಾಗೇವಾಡಿ: ಪಟ್ಟಣದ ಹುಬ್ಬಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ ವಿಭಾಗೀಯ ಕಚೇರಿಯ ಕಂಪೌಂಡ್ ಗೋಡೆ ನಿರ್ಮಾಣ ಕಾಮಗಾರಿಗೆ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಗುರುವಾರ ಸಂಜೆ ಅಡಿಗಲ್ಲು ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಹೆಸ್ಕಾಂ ವಿಭಾಗೀಯ ಕಚೇರಿಯ ಕಂಪೌಂಡ್ ಗೋಡೆ ಕಾಮಗಾರಿಯನ್ನು ಗುತ್ತಿಗೆದಾರರು ಉತ್ತಮ ಗುಣಮಟ್ಟದಿಂದ ಕಾಮಗಾರಿ ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಬೇಕು. ಈ ಕಂಪೌಂಡ್ ಗೋಡೆ ಪಕ್ಕದಲ್ಲಿ ಬೈಪಾಸ್ ರಸ್ತೆ ನಿರ್ಮಾಣವಾಗುವದರಿಂದಾಗಿ ಮುಂದೆ ಯಾವುದೇ ತೊಂದರೆಯಾಗದಂತೆ ಕಂಪೌಂಡ್ ಕಾಮಗಾರಿ ನಿರ್ಮಾಣವಾಗುವ ಕಡೆಗೆ ಗುತ್ತಿಗೆದಾರರು ಗಮನ ಹರಿಸಿ ತಮ್ಮ ಕಾಮಗಾರಿ ಕೈಗೊಳ್ಳಬೇಕೆಂದು ಸೂಚನೆ ನೀಡಿದರು.

ಹೆಸ್ಕಾಂ ಇಲಾಖೆಯ ಸಿವ್ಹಿಲ್ ಎಇಇ ಜಿ.ಟಿ.ಬಡಿಗೇರ ಅವರು, ವಿಭಾಗೀಯ ಕಚೇರಿಗೆ 2.25 ಮೀಟರ ಉದ್ದದ ಕಂಪೌಂಡ್ ಗೋಡೆ ಕಾಮಗಾರಿ ರೂ. 38.5 ಲಕ್ಷ ವೆಚ್ಚದಲ್ಲಿ ನಿರ್ಮಾಣವಾಗಲಿದೆ ಎಂದು ಸುದ್ದಿಗಾರರಿಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಹೆಸ್ಕಾಂ ಇಲಾಖೆಯ ಅಧೀಕ್ಷಕ ಅಭಿಯಂತರ ಸಿದ್ದಪ್ಪ ಬೆಂಜಗೆರೆ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾದ ಜಿ.ಬಿ. ಸಂಪನ್ನವರ, ಸಿದ್ರಾಮ ಬಿರಾದಾರ, ಸಹಾಯಕ ಅಭಿಯಂತರರಾದ ಎಸ್.ಎಂ.ತಳವಾರ, ಎಸ್.ಎಂ.ಕೆಂಗನಾಳ, ಗುತ್ತಿಗೆದಾರ ರಾಜಶೇಖರ ಚೋರಗಿ, ಸುಭಾಸ ನಾಶಿ, ರಾಜ್ಯ ಸಹಕಾರ ಮಹಾಮಂಡಳ ನಿರ್ದೇಶಕ ಈರಣ್ಣ ಪಟ್ಟಣಶೆಟ್ಟಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುರೇಶ ಹಾರಿವಾಳ, ಪುರಸಭೆ ಸದಸ್ಯರಾದ ಜಗದೇವಿ ಗುಂಡಳ್ಳಿ, ಪ್ರವೀಣ ಪೂಜಾರಿ, ಮುಖಂಡರಾದ ಶೇಖರ ಗೊಳಸಂಗಿ, ಬಸಣ್ಣ ದೇಸಾಯಿ,ಬಸವರಾಜ ಕೋಟಿ, ಬಸವರಾಜ ರಾಯಗೊಂಡ, ಸಿ.ಎಸ್.ಪಾಟೀಲ, ರವಿ ರಾಠೋಡ, ರವಿ ಚಿಕ್ಕೊಂಡ,ನಿಸಾರ ಚೌಧರಿ, ಎಂ.ಜಿ.ಆದಿಗೊಂಡ, ಸಂಕನಗೌಡ ಪಾಟೀಲ, ಪರಶುರಾಮ ಜಮಖಂಡಿ, ರಮಜಾನ ಹೆಬ್ಬಾಳ,ಕಾಶೀನಾಥ ರಾಠೋಡ, ಪುರಸಭೆ ವ್ಯವಸ್ಥಾಪಕ ವಿರೇಶ ಹಟ್ಟಿ, ಪುರಸಭೆ ಅಭಿಯಂತರ ಸಂತೋಷ ಗಿಡ್ಡಸಣ್ಣನವರ ಇತರರು ಇದ್ದರು.

### ಪರಶುರಾಮ ಮ್ಯಾಕೇರಿ ಕೊಲೆ । ಹಳೆ ದ್ವೇಷ ಹಾಗೂ ಹಣದ ವ್ಯವಹಾರ । ಆರೋಪಿಗಳು ಪರಾರಿ

# ಕೋರಳ್ಳಿಯಲ್ಲಿ ಯುವಕನ ಬರ್ಬರ ಹತ್ಯೆ!

**ಉದಯರಶ್ಮಿ ನ್ಯೂಸ್**



ಆಲಮೇಲ: ಕೊರಳ್ಳಿ ಗ್ರಾಮದ ಬಬಲೇಶ್ವರ ರಸ್ತೆಯ ನಂದಿ ಇವರ ಜಮಿನಿನಲ್ಲಿ ಬುಧವಾರ ರಾತ್ರಿ ನಾಲ್ಕು ಜನ ಆರೋಪಿತರು ಸೇರಿಕೊಂಡು, ಅದೇ ಗ್ರಾಮದ ಪರಶುರಾಮ ತಂದೆ ಯಲ್ಲಪ್ಪ ಮ್ಯಾಕೇರಿ (25) ಎಂಬುವವರನ್ನು ಹಣದ ವ್ಯವಹಾರ ಹಾಗೂ ಹಳೆ ದ್ವೇಷದಿಂದ ಬುಧವಾರ ಪರಶುರಾಮ ತಂದೆ ಯಲ್ಲಪ್ಪ ಮ್ಯಾಕೇರಿ ಕೊಲೆಯಾದ ಘಟನೆ ಆಲಮೇಲ ತಾಲೂಕಿನ ಕೊರಳ್ಳಿ ಗ್ರಾಮದಲ್ಲಿ ನಡೆದಿದೆ.

ಕೊರಳ್ಳಿ ಗ್ರಾಮದಲ್ಲಿ ಒಂದು ವರ್ಷದ ಹಿಂದೆ ನಡೆದ ಹಣದ ವ್ಯವಹಾರಕ್ಕೆ ಸಂಬಂಧಿಸಿದಂತೆ ಕೊಲೆಯಾದ ಪರಶುರಾಮ ತಂದೆ ಯಲ್ಲಪ್ಪ ಮ್ಯಾಕೇರಿ ಹಾಗೂ ನಾಲ್ಕು ಜನ ಆರೋಪಿತರ ಮಧ್ಯೆ ಆಗಾಗ ಜಗಳ ನಡೆದುಕೊಂಡು ಬರುತ್ತಿದವು, ಈ ಕುರಿತು ಗ್ರಾಮದ ಹಿರಿಯರ ಸಮಕ್ಷಮ ಕೊಲೆಯಾದ ಪರಶುರಾಮ ಹಾಗೂ ಆರೋಪಿತರ ಮಧ್ಯೆ ರಾಜಿ ಸಂಧಾನವು ಕೂಡಾ ಆಗಿತ್ತು, ಕಳೆದ ಒಂದು ವರ್ಷದಿಂದ ಕೊಲೆಯಾದ ಪರಶುರಾಮ ಕೊರಳ್ಳಿ ಗ್ರಾಮವನ್ನು ಬಿಟ್ಟು ಸಿಂದಗಿಯಲ್ಲಿ ವಾಸವಾಗಿ ಉಪ ಜೀವನ ನಡೆಸುತ್ತಿದ್ದನು. ಬುಧುವಾರ ಕೊರಳ್ಳಿ ಗ್ರಾಮದಲ್ಲಿರುವ ತೋಟಕ್ಕೆ ಹೋಗಿ ಬರುವುದಾಗಿ ಮನೆಯಿಂದ ಹೇಳಿ ಹೋದ ಪರಶುರಾಮನನ್ನು ನಾಲ್ಕು ಜನ ಆರೋಪಿಗಳು ಸೇರಿಕೊಂಡು ಬಾಕು ಹಾಗೂ ಬೀರ್ ಬಾಟಲಿಯಿಂದ ಹೊಡೆದು ಕೊಲೆ ಮಾಡಿದ್ದು, ಈ ಕುರಿತು ಮೃತನ ಹೆಂಡತಿ ಶೀಲಾ ಮ್ಯಾಕೇರಿ ಆಲಮೇಲ ಪೊಲೀಸ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರುಷಿಕೇಶ್ ಸೋನವಾಣೆ ಭಗವಾನ ಹಾಗೂ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಶಂಕರ ಮಾರಿಹಾಳ, ಇಂಡಿ ಡಿವೈಎಸ್ಪಿ ಎಚ್.ಜಗದೀಶ, ಸಿಂದಗಿ ಸಿಪಿಐ ನಾನಾಗೌಡ ಪೊಲೀಸ್ ಪಾಟೀಲ, ಪಿಸೈ ಕುಮಾರ ಹಾಡಕಾರ ಭೇಟಿ ನೀಡಿ ಪರಿಶೀಲಿಸಿದ್ದು, ಆರೋಪಿಗಳ ಪತ್ತೆ ಕುರಿತು ತಂಡವನ್ನು ರಚಿಸಿ, ಆರೋಪಿಗಳ ಶೋಧಕಾರ್ಯ ಕೈಗೊಂಡಿದ್ದಾರೆ.

# ಮಾಜಿ ಐಎಎಸ್ ಅಧಿಕಾರಿ, ನಟ ಕೆ ಶಿವರಾಮ್ ನಿಧನ

**ಉದಯರಶ್ಮಿ ನ್ಯೂಸ್**

ಬೆಂಗಳೂರು: ಮಾಜಿ ಐಎಎಸ್ ಅಧಿಕಾರಿ, ನಟ ಕೆ ಶಿವರಾಮ್ ಗುರುವಾರ ಹೃದಯಾಘಾತದಿಂದ ನಿಧನರಾಗಿದ್ದಾರೆ.

ಕೆ ಶಿವರಾಮ್ ಅವರು ಮೊದಲ ಬಾರಿಗೆ ಕನ್ನಡದಲ್ಲಿ ಪರೀಕ್ಷೆ ಬರೆದು ಐಎಎಸ್ ಅಧಿಕಾರಿಯಾಗಿದ್ದರು.

ನಟ ಕೆ ಶಿವರಾಮ್ ಅವರಿಗೆ ಬುಧವಾರ ಹೃದಯಾಘಾತವಾಗಿತ್ತು. ಅವರನ್ನು ಬೆಂಗಳೂರಿನ ಆಸ್ಪತ್ರೆಗೆ ದಾಖಲಿಸಿ, ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು. ಆದರೆ ಚಿಕಿತ್ಸೆ ಫಲಿಸದೆ ಗುರುವಾರ ಬೆಳಗ್ಗೆ ಮೃತಪಟ್ಟಿದ್ದಾರೆ. ಅವರ ಅಂತಿಮ ದರ್ಶನಕ್ಕೆ ಸ್ವಗೃಹದಲ್ಲಿ ವ್ಯವಸ್ಥೆ ಮಾಡಲಾಗಿದೆ.

ರಾಮನಗರ ಜಿಲ್ಲೆಯ ಬಿಡದಿ ಬಳಿಯ ಹಳ್ಳಿಯಲ್ಲಿ 1953ರಲ್ಲಿ ಜನಿಸಿದ್ದ ಶಿವರಾಮು, 1985ರಲ್ಲಿ ಕೆಎಎಸ್ ಅಧಿಕಾರಿಯಾಗಿ ಆಯ್ಕೆಯಾಗಿದ್ದರು. ಬಳಿಕ ಕನ್ನಡದಲ್ಲಿಯೇ ಐಎಎಸ್ ಪರೀಕ್ಷೆ ಬರೆದು, ಐಎಎಸ್ ಅಧಿಕಾರಿಯೂ ಆಗಿದ್ದರು. ಆ ಮೂಲಕ ಕನ್ನಡದಲ್ಲಿ ಐಎಎಸ್ ಬರೆದು, ಅಧಿಕಾರಿಯಾದ ಮೊದಲ ಕನ್ನಡಿಗ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು. ಕೆ.ಶಿವರಾಮ್ ಅವರು ರಾಜ್ಯದ ಹಲವು ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದರು.



ಸಿನಿಮಾ ರಂಗದಲ್ಲೂ ತೊಡಗಿಸಿಕೊಂಡಿದ್ದ ಕೆ.ಶಿವರಾಮ್ 1993ರಲ್ಲಿ ಸಿನಿರಂಗಕ್ಕೆ ಪಾದಾರ್ಪಣೆ ಮಾಡಿದ್ದರು. ನಾಗತಿಹಳ್ಳಿ ನಿರ್ದೇಶನದ 'ಬಾನಲ್ಲೆ ಮಧುಚಂದ್ರಕೆ' ಸಿನಿಮಾದಲ್ಲಿ ನಾಯಕ ನಟನಾಗಿ ನಟಿಸಿದ್ದರು. ವಸಂತ ಕಾವ್ಯ, ಖಳನಾಯಕ, ಸಾಂಗ್ಲಿಯಾನ-3, ಪ್ರತಿಭಟನೆ, ಯಾರಿಗೆ ಬೇಡ ದುಡ್ಡು, ಗೇಮ್ ಫಾರ್ ಲವ್ ಹಾಗೂ ಟೈಗರ್ ಸಿನಿಮಾಗಳಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸಿದ್ದರು.

2013ರಲ್ಲಿ ಐಎಎಸ್ ಹುದ್ದೆಗೆ ರಾಜೀನಾಮೆ ನೀಡಿ ಸ್ವಯಂ ನಿವೃತ್ತಿ ಪಡೆದ ಅವರು ಕಾಂಗ್ರೆಸ್‌ನಿಂದ ರಾಜಕೀಯ ಜೀವನ ಆರಂಭಿಸಿದ್ದರು. 2014ರ ಲೋಕಸಭಾ ಚುನಾವಣೆಯಲ್ಲಿ ವಿಜಯಪುರ ಕ್ಷೇತ್ರದಲ್ಲಿ ಸ್ಪರ್ಧಿಸಿ ಸೋತಿದ್ದರು. ಬಳಿಕ ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ್ದರು.

ಶಿವರಾಮ್ ನಿಧನಕ್ಕೆ ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಸಂತಾಪವನ್ನು ವ್ಯಕ್ತಪಡಿಸಿ ಟ್ವೀಟ್ ಮಾಡಿದ್ದಾರೆ. ಕನ್ನಡದಲ್ಲಿ ಪ್ರಪ್ರಥಮ ಬಾರಿಗೆ ಐಎಎಸ್ ಪರೀಕ್ಷೆ ಬರೆದು ಭಾರತೀಯ ಆಡಳಿತ ಸೇವೆಯಲ್ಲಿ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದ ಶ್ರೀ ಕೆ.ಶಿವರಾಮ್ ಅವರು ಇಂದು ನಿಧನರಾದ ಸುದ್ದಿ ತಿಳಿದು ದುಃಖವಾಯಿತು. ನಟರಾಗಿಯೂ ಹಲವು ಚಿತ್ರಗಳಲ್ಲಿ ನಟಿಸಿ, ಕನ್ನಡ ಚಿತ್ರರಂಗಕ್ಕೆ ಅವರು ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಶ್ರೀಯುತರ ಆತ್ಮಕ್ಕೆ ಶಾಂತಿ ಸಿಗಲಿ ಹಾಗೂ ಅವರ ಕುಟುಂಬ ವರ್ಗಕ್ಕೆ ಅಗಲಿಕೆಯ ನೋವು ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಪ್ರಾರ್ಥಿಸುತ್ತೇನೆ ಎಂದು ಹೇಳಿದ್ದಾರೆ.

**Printed by:** AVINASH BIDARI, **Published and Onwed by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR